
# ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು

ಒಂದೇ ಒಂದು ಫೋನ್ ಕಾಲ್

ನಿಮ್ಮ ಸಂಪೂರ್ಣ ಜೀವನವನ್ನು ಬದಲಾಯಿಸಬಹುದು...!

**ವಾರ್ತಾ ಪತ್ರ - ಸೆಪ್ಟೆಂಬರ್ 2022 | ಸಂಚಿಕೆ: 5**



## "ನನ್ನ ಏಕೈಕ ಆಸೆ" - ಬ್ರಹ್ಮರ್ಷಿ ಪತ್ರೀಜಿ

ನನ್ನ ಏಕೈಕ ಆಸೆ, ನನ್ನ ಏಕೈಕ ಕಾರ್ಯ, ನನ್ನ ಏಕೈಕ ಗುರಿ, ನನ್ನ ಏಕೈಕ ಕನಸು ಏನೆಂದರೆ: "ಸಮಸ್ತ ಭೂಮಂಡಲವು ಪಾಪದಿಂದ ಮುಕ್ತ ಭೂಮಂಡಲವಾಗುವುದನ್ನು ಕಾಣುವುದು." ಕಟ್ಟ ಕಡೆಯ ಮನುಷ್ಯ ಶಾಕಾಹಾರಿಯಾಗುವವರೆಗೆ ನಾನು ಈ ಭೂಮಂಡಲದ ಮೇಲೆ ಇರುತ್ತೇನೆ.

"ಆಹಾರ"ದ ಹೆಸರಿನಲ್ಲಿ ಹಿಮಾಲಯದಷ್ಟು ಅಮಾನವೀಯತೆಯನ್ನು ಎಸಗುತ್ತಿರುವ ಕ್ರೌರ್ಯ ಮತ್ತು ಹಿಂಸೆಯ ಭಾರದಿಂದ ಭೂಮಾತೆಯನ್ನು ಮುಕ್ತಗೊಳಿಸುವುದು ನನ್ನ ಹೆಗ್ಗುರಿಯಾಗಿದೆ.

ಕೇವಲ ಧ್ಯಾನದ ಮೂಲಕ ಮಾತ್ರವೇ ಹಿಮಾಲಯದಷ್ಟು ಕ್ರೌರ್ಯದಿಂದ ಹೊರಬರಲು ಸಾಧ್ಯವಿದೆ. ಮನುಷ್ಯನು ಧ್ಯಾನದ ಮೂಲಕ ಸಂವೇದನಶೀಲನಾಗದ ಹೊರತು, ಆಹಾರಕ್ಕೋಸ್ಕರ ಎಸಗಲಾಗುತ್ತಿರುವ ಈ ಹಿಂಸೆಯಿಂದ ಅವನು ಹೊರಬರುವುದು ಸಾಧ್ಯವಿಲ್ಲ.

"ಸಸ್ಯ-ಆಧಾರಿತ" ಆಹಾರವೇ ಮಾನವನ ನೈಜ ಆಹಾರವಾಗಿದೆ. ಕಟ್ಟ ಕಡೆಯ ಮನುಷ್ಯ ಇದನ್ನು ಅರ್ಥ ಮಾಡಿಕೊಂಡ ದಿನದಂದು ಭೂಮಿಯ ಮೇಲೆ ಸ್ವರ್ಗದ ಸ್ಥಾಪನೆಯ ಘೋಷಣೆಯಾಗುತ್ತದೆ. ಈಗ ಸದ್ಯಕ್ಕಂತೂ ಭೂಮಿಯ ಮೇಲೆ ವಿಶಾಲ ನರಕವಿದೆ.

ಆದ್ದರಿಂದ, ನಾವು ಧ್ಯಾನ ಶಾಸ್ತ್ರವನ್ನು ಪ್ರಚುರಗೊಳಿಸುತ್ತಿದ್ದೇವೆ. ಇದರಿಂದ ಮಾನವ ಜೀವಿಗಳಲ್ಲಿ ಒಂದು ರೀತಿಯ ಸದಾಚಾರವು ಬರುತ್ತದೆ ಮತ್ತು ಸುಂದರ ಹಾಗೂ ಪ್ರೀತಿಯ ಪ್ರಾಣಿ, ಪಕ್ಷಿ, ಮೀನುಗಳನ್ನು ಸಂವೇದನರಹಿತವಾಗಿ ಕೊಲ್ಲುವುದು ನಿಲ್ಲುತ್ತದೆ. ನನಗೆ ಅದು "ನೈಜ ಆಧ್ಯಾತ್ಮಿಕತೆ"ಯಾಗಿದೆ.

ನಿಮಗೆ ಮೂರನೇ ಕಣ್ಣು ಇದೆಯೋ ಇಲ್ಲವೋ ಎಂಬುದನ್ನು ನಾನು ಕಾಳಜಿ ಮಾಡುವುದಿಲ್ಲ. ನೀವು ಶಾಕಾಹಾರಿಗಳಾಗುವುದು ನನಗೆ ಬೇಕು. ನಿಮ್ಮ ಕುಂಡಲಿನಿಯು ಜಾಗೃತಗೊಳ್ಳುತ್ತಿದೆಯೋ ಇಲ್ಲವೋ ಎಂಬುದನ್ನು ನಾನು ಕಾಳಜಿ ಮಾಡುವುದಿಲ್ಲ. ನನಗೆ ಎಲ್ಲೆಡೆ ಶಾಕಾಹಾರವು ಬೇಕು... ನಾನು ನಿಮ್ಮ "ಸೂಕ್ಷ್ಮ ಶರೀರ ಯಾನ"ದ ಕುರಿತು ಕಾಳಜಿ ಮಾಡುವುದಿಲ್ಲ... ಮತ್ತು ಲಕ್ಷಾಂತರ ಸೂಕ್ಷ್ಮ ಲೋಕಗಳು, ಕಾರಣ ಲೋಕಗಳು ಮಹಾ ಕಾರಣ ಲೋಕಗಳ ನಿಮ್ಮ ಮಹಾ ಜ್ಞಾನದ ಕುರಿತು ನಾನು ಹೆಚ್ಚಿಗೆ ತಲೆಕೆಡಿಸಿಕೊಳ್ಳುವುದಿಲ್ಲ.


ಸಮಸ್ತ ಪ್ರಾಣಿ ಸಾಮ್ರಾಜ್ಯದ ಕುರಿತು ಕರುಣೆ ಮತ್ತು ಮಿತ್ರತ್ವದ ಕುರಿತು ನಾನು ಕಾಳಜಿ ಮಾಡುತ್ತೇನೆ. ನನ್ನ ಪ್ರಾಣಿಗಳು, ಪಕ್ಷಿಗಳು, ಮೀನುಗಳು ಈ ಭೂಮಿಯ ಮೇಲೆ ಅತ್ಯಂತ ಸಂತೋಷಭರಿತವಾಗಿ ಜೀವಿಸುವುದು ನನಗೆ ಬೇಕು. ನನ್ನ ಭೂಮಾತೆಯು ನಿಜವಾಗಿಯೂ ನಿರುಮ್ಮಳವಾಗಿ, ಪ್ರಶಾಂತತೆಯಿಂದ ಮುಗುಳ್ನಗುವುದನ್ನು ನಾನು ಕಾಣಬೇಕು.

**ಪ್ರತಿ ಜನ್ಮವು ಆಗಮನದ ಸಂಭ್ರಮಕ್ಕೆ ಕಾರಣವಾದರೆ, ಪ್ರತಿ ಸಾವು ನಿರ್ಗಮನದ ಸಂಕೇತ.**
**ಆತ್ಮಹತ್ಯೆಯನ್ನು ಹೊರತುಪಡಿಸಿ ಸಾವನ್ನು ಕೂಡಾ ಸಂಭ್ರಮಿಸಬೇಕು.**

**~ ಬ್ರಹ್ಮರ್ಷಿ ಪಿತಾಮಹ ಪತ್ರೀಜಿ**



# ಪತ್ರೀಜಿಯವರ ಕಿರು ಪರಿಚಯ



ಪತ್ರೀಜಿಯವರು ತೆಲಂಗಾಣ ರಾಜ್ಯದ ನಿಜಾಮಾಬಾದ್ ಜಿಲ್ಲೆಯ 'ಷಕ್ಕರ್‌ನಗರ' ಎನ್ನುವ ಗ್ರಾಮದಲ್ಲಿ 1947 ರಲ್ಲಿ ಶ್ರೀಮತಿ ಸಾವಿತ್ರಿದೇವಿ ಮತ್ತು ಶ್ರೀ ರಮಣಾರಾವು ದಂಪತಿಗಳಿಗೆ ಜನಿಸಿದರು. ಇವರು ಕೃಷಿ ವಿಜ್ಞಾನದಲ್ಲಿ ಮಾತ್ರವಲ್ಲದೆ ಇಂಗ್ಲೀಷ್ ಸಾಹಿತ್ಯದಲ್ಲಿ ಕೂಡ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಸುಪ್ರಸಿದ್ಧ ಗುರುಗಳಾದ ಟಿ.ಆರ್.ಮಹಾಲಿಂಗಮ್ ಅವರ ಶಿಷ್ಯರಾಗಿದ್ದ ಶ್ರೀ ಚಂದ್ರಶೇಖರನ್ ಗುರುಗಳ ಮಾರ್ಗದರ್ಶನದಲ್ಲಿ ಗಾಯಕರಾಗಿ ಮತ್ತು ಕೊಳಲುವಾದಕರಾಗಿ ಶಾಸ್ತ್ರೀಯ ಸಂಗೀತದ ಅಭ್ಯಾಸ ಮಾಡಿದ್ದಾರೆ.

ಪತ್ರೀಜಿಯವರು 1974 ರಲ್ಲಿ ಸ್ವರ್ಣಮಾಲಾ ಸಿರಿಗುರಿ ಅವರನ್ನು ವಿವಾಹವಾದರು. ಅವರಿಗೆ ಇಬ್ಬರು ಹೆಣ್ಣು ಮಕ್ಕಳು.. 1978ರಲ್ಲಿ ಪರಿಣಿತಾ ಮತ್ತು 1982ರಲ್ಲಿ ಪರಿಮಳಾ ಜನಿಸಿದರು.

ಪತ್ರೀಜಿಯವರು 'ಆನಾಪಾನಸತಿ' ಧ್ಯಾನದೊಡನೆ ಕೆಲವು ಗಂಭೀರವಾದ ಧ್ಯಾನ ಪ್ರಯೋಗಗಳನ್ನು ತಮ್ಮ ಗೆಳೆಯ ರಾಮಚೆನ್ನಾರೆಡ್ಡಿಯವರೊಂದಿಗೆ ಮಾಡಿದರು. ತತ್ ಪತ್ರೀಜಿಯವರು 1979ರಲ್ಲಿ ಜ್ಞಾನೋದಯ ಹೊಂದಿದರು.

ಪತ್ರೀಜಿ ಇತರ ಇಬ್ಬರು ಮಾಸ್ಟರ್ ರಾಮಚೆನ್ನ ರೆಡ್ಡಿ ಮತ್ತು ವೆಂಕಟರತ್ನಂ ಅವರೊಂದಿಗೆ ಜನವರಿ 1, 1981 ರಂದು ಶ್ರೀ ಸದಾನಂದಯೋಗಿ ಅವರನ್ನು ಮೊದಲ ಬಾರಿಗೆ ಭೇಟಿ ಮಾಡಿದರು. ಸ್ವಾಮೀಜಿ ಅವರನ್ನು ನೋಡಿದರು ಮತ್ತು ಸ್ವಲ್ಪ ಸಮಯದ ನಂತರ ಮಾತನಾಡಿದರು: "ನೀವು ಇಲ್ಲಿ ಬ್ರಹ್ಮಜ್ಞಾನವನ್ನು ಹೊರತುಪಡಿಸಿ ಬೇರೇನೂ ಪಡೆಯುವುದಿಲ್ಲ. " ಎಂದು.



"ಸ್ವಾಮೀಜಿ ! ನಮಗೂ ಅದೇ ಬೇಕು" ಎಂಬ ಉತ್ತರದಿಂದ ಸದಾನಂದ ಯೋಗಿಯವರು ತೃಪ್ತರಾದರು. ಅರಬಿಕ್ ಮತ್ತು ತೆಲುಗು ಭಾಷೆಯಲ್ಲಿ ಅನೇಕ ಅದ್ಭುತವಾದ ಆಧ್ಯಾತ್ಮಿಕ ವಿಷಯಗಳನ್ನು ಹೇಳುತ್ತಾ ಹೋದರು. ಉತ್ಸಾಹಿ ವಿದ್ಯಾರ್ಥಿಗಳು ಮಂತ್ರಮುಗ್ಧರಾದರು. ಸುಮಾರು 15 ರಿಂದ 20 ನಿಮಿಷಗಳ ನಂತರ, ಸದಾನಂದ ಯೋಗಿ "ನಾಳೆ ಬೆಳಿಗ್ಗೆ ಬನ್ನಿ. ನಾನು ನಿಮಗೆ ಧ್ಯಾನ ಹೇಳಿ ಕೊಡುತ್ತೇನೆ" ಎಂದು ಹೇಳಿದರು.

1981 ರ ಜನವರಿ 1 ರಿಂದ 1983 ಮೇ 22 ರವರೆಗೆ ಕರ್ನೂಲ್‌ನಲ್ಲಿ ಪತ್ರೀಜಿಯವರು ಶ್ರೀ ಸದಾನಂದಯೋಗಿ ಅವರ ಜೊತೆ ತುಂಬಾ ಸಮಯವನ್ನು ಕಳೆದರು. ಪತ್ರೀಜಿ ಅವರು ಶ್ರೀ ಸದಾನಂದಯೋಗಿ ಅವರ ಸುದೀರ್ಘ ಜೀವನದ ಅನುಭವಗಳನ್ನು ಕೇಳುತ್ತಲೇ ಇರುತ್ತಿದ್ದರು. ಸದಾನಂದಯೋಗಿಗಳು ಇಚ್ಛಾ ಮರಣಿಯಾಗಿ 22 ಮೇ 1983 ರಂದು ಪತ್ರೀಜಿ ಮತ್ತು ಡಾ. ಶ್ರೀಪಾದ ಪಿನಾಕಪಾಣಿಯವರ ಸಮ್ಮುಖದಲ್ಲಿ ಅವರ ದೇಹವನ್ನು ಬಿಟ್ಟರು.





ಧ್ಯಾನವನ್ನು ಎಲ್ಲಾ ಕಡೆ ಪ್ರಚಾರಮಾಡಲು ಇವರು ಮೊಟ್ಟ ಮೊದಲ ಬಾರಿಗೆ 1990 ರಲ್ಲಿ 'ಕರ್ನೂಲ್ ಪಿರಮಿಡ್ ಸ್ಪಿರಿಚ್ಯುವಲ್ ಸೊಸೈಟಿ' ಎಂಬ ಹೆಸರಿನ ಧ್ಯಾನದ ಗುಂಪನ್ನು ಕಟ್ಟಿದರು. 1992 ರಲ್ಲಿ ತಾವು ಕೆಲಸ ಮಾಡುತ್ತಿದ್ದ ಕೋರಮಂಡಲ್ ರಸಗೊಬ್ಬರಗಳ ಮಾರ್ಕೆಟಿಂಗ್ ಮೆನೇಜರ್ ಕೆಲಸಕ್ಕೆ ರಾಜೀನಾಮೆ ನೀಡಿ ಪೂರ್ಣ ಪ್ರಮಾಣದಲ್ಲಿ ಆಧ್ಯಾತ್ಮಿಕ ಜೀವನ ರಂಗವನ್ನು ಪ್ರವೇಶಿಸಿದರು.

ಧ್ಯಾನವು ಆರೋಗ್ಯ ಮತ್ತು ಶಾಂತಿಗಾಗಿ ಯೋಗಾಭ್ಯಾಸವಾಗಿ ಮಾತ್ರವಲ್ಲದೆ, ತಮ್ಮ-ತಮ್ಮ ಅನಂತ ಆತ್ಮಕ್ಕೆ ಸಂಪರ್ಕ ಸಾಧಿಸುವ, ತಮ್ಮದೇ ಆದ ನೈಜತೆಯನ್ನು ವ್ಯಕ್ತಪಡಿಸುವ ಅತ್ಯುನ್ನತ ಕ್ರಮದ ಸಾಧನವಾಗಿದೆ ಎನ್ನುವುದು ಪತ್ರೀಜಿಯವರ ಪ್ರಮುಖ ಬೋಧನೆಯಾಗಿದೆ.

**ಜನನವು ಒಂದು ಪ್ರವೇಶ, ಸಾವು ಎಂದರೆ ಒಂದು ನಿರ್ದಿಷ್ಟ ಜೈವಿಕ ವ್ಯವಸ್ಥೆಯಿಂದ ನಿರ್ಗಮಿಸುವುದು.**
**ಹುಟ್ಟಿನ ಕಾರಣದಿಂದ ಆತ್ಮವು ದೇಹದೊಳಗೆ ಪ್ರವೇಶಿಸಿದರೆ, ಸಾವುನಲ್ಲಿ ಆತ್ಮವು ದೇಹದಿಂದ ಹೊರಬರುವುದು.**
**~ ಬ್ರಹ್ಮರ್ಷಿ ಪಿತಾಮಹ ಪತ್ರೀಜಿ**



# ಪಿರಮಿಡ್ ಸ್ಪಿರಿಚ್ಯುವಲ್ ಸೊಸೈಟೀಸ್ ಮೂವ್‌ಮೆಂಟ್‌ನ ರಚನೆ



ಪತ್ರೀಜಿಯವರು ಭಾರತದಲ್ಲಿ 1990 ರಲ್ಲಿ 'ಪಿರಮಿಡ್ ಸ್ಪಿರಿಚ್ಯುವಲ್ ಸೊಸೈಟೀಸ್ ಮೂವ್‌ಮೆಂಟ್' ಅನ್ನು ಸ್ಥಾಪಿಸಿದರು. ಈ ಹೊಸ ಯುಗದ ಆಂದೋಲನವು ಸಾವಿರಾರು ಸಂಘಟಿತ ಲಾಭ-ರಹಿತ ಸಮೂಹಗಳನ್ನು ಮತ್ತು ಪಿರಮಿಡ್ ಧ್ಯಾನ ಕೇಂದ್ರಗಳನ್ನು ಒಳಗೊಂಡಿದೆ. ಆನಾಪಾನಸತಿ ಧ್ಯಾನ, ಶಾಕಾಹಾರ ಮತ್ತು ಆಧ್ಯಾತ್ಮಿಕ ವಿಜ್ಞಾನದ ಬಗ್ಗೆ ಭೂಮಿಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ತಿಳಿಯಲೇಬೇಕು ಎಂಬ ಅಂಶಗಳು ಈ ಧ್ಯಾನ ಕೇಂದ್ರಗಳ ಉದ್ದೇಶವಾಗಿದೆ. ಲಕ್ಷಾಂತರ ಜನರು ಪತ್ರೀಜಿಯವರ ಸಾಮೂಹಿಕ ಧ್ಯಾನ ತರಗತಿಗಳಿಗೆ ಹಾಜರಾಗಿದ್ದಾರೆ. ಸದಾ ಸಮ್ಮೋಹನಗೊಳಿಸುವ ಕೊಳಲು ವಾದನದೊಂದಿಗೆ, ಪತ್ರೀಜಿಯವರು ಆಳವಾದ ಧ್ಯಾನಕ್ಕೆ ಇಳಿಯಲು ಸಂಗೀತ ಮತ್ತು ಧ್ಯಾನವನ್ನು ಮೇಳೈಸಿದ್ದಾರೆ.


## ಧ್ಯಾನವನ್ನು ಕಲಿಸುವುದು

ಪತ್ರೀಜಿಯವರು ಸಮಾಜದ ಎಲ್ಲಾ ವಿಭಾಗಗಳಿಗೆ ವರ್ಗ, ಧರ್ಮ ಅಥವಾ ರಾಷ್ಟ್ರೀಯತೆಯ ಯಾವುದೇ ಭೇದ-ಭಾವವಿಲ್ಲದೆ ಧ್ಯಾನ ಶಿಕ್ಷಣವನ್ನು ನೀಡುತ್ತಾ, ಧ್ಯಾನದ ಮಹಾ ಪ್ರತಿಪಾದಕರಾಗಿದ್ದಾರೆ. ಇವರು ಭಾರತದ ಎಲ್ಲಾ ಕಡೆ ವ್ಯಾಪಕವಾಗಿ ಪ್ರಯಾಣಿಸಿ, ದೇಶದ ಪ್ರತಿಯೊಂದು ಮೂಲೆ-ಮೂಲೆಗೂ, ಹಳ್ಳಿ-ಹಳ್ಳಿಗೂ ವರ್ಷಗಟ್ಟಲೆ ಪ್ರಯಾಣ ಬೆಳೆಸಿ ಎಲ್ಲಾ ವರ್ಗದವರಿಗೂ, ಎಲ್ಲಾ ವಯಸ್ಸಿನವರಿಗೂ, ಎಲ್ಲಾ ಸ್ತರದವರಿಗೂ ಧ್ಯಾನವನ್ನು ಕಲಿಸಿದರು. ಇವರ ಧ್ಯಾನದ ಅವಧಿಗಳಲ್ಲಿ ದೂರ-ದೂರದ ಹಳ್ಳಿಗಳಲ್ಲಿ, ಜೈಲಿನಲ್ಲಿರುವ ಮತ್ತು ಆಸ್ಪತ್ರೆಯಲ್ಲಿರುವ ಸಾವಿರಾರು ಜನರು ರೋಗಗಳಿಂದ ಗುಣಮುಖರಾಗಿ ಧ್ಯಾನಿಗಳಾಗಿ, ಶಾಕಾಹಾರಿಗಳಾಗಿ ಬದಲಾಗಿದ್ದಾರೆ, ಆಗುತ್ತಿದ್ದಾರೆ. 'ಹೊಸಯುಗದ ಆಧ್ಯಾತ್ಮಿಕ ವಿಜ್ಞಾನ', 'ಧ್ಯಾನದ ವಿಜ್ಞಾನ', 'ಶಕ್ತಿ, ಪ್ರಜ್ಞೆ ಮತ್ತು ವಿವೇಕ', 'ಶಾಕಾಹಾರ', 'ಪಿರಮಿಡ್ ಶಕ್ತಿ', 'ನಿಮ್ಮ ವಾಸ್ತವಿಕತೆಯ ಸೃಷ್ಟಿಕರ್ತರು ನೀವೇ' ಮತ್ತು 'ಭಗವದ್ಗೀತೆಯ ಸಾರ' ಈ ಎಲ್ಲಾ ವಿಷಯಗಳ ಕುರಿತು ಪತ್ರೀಜಿಯವರು ಪ್ರಪಂಚದಾದ್ಯಂತ ಸಂಚರಿಸಿ ತೀವ್ರವಾದ ಧ್ಯಾನ ಶಿಕ್ಷಣ ಮತ್ತು ಕಾರ್ಯಾಗಾರಗಳನ್ನು ಕೈಗೊಂಡು ಜನರಿಗೆ ಈ ವಿಷಯಗಳ ಕುರಿತು ಜ್ಞಾನವನ್ನು ನೀಡಿದ್ದಾರೆ. ಅವರ ಅವಿರತವಾದ ಪರಿಶ್ರಮದಿಂದ ಮೂರು ದಶಕಗಳಲ್ಲಿ ಭಾರತದ ಉದ್ದಗಲಕ್ಕೂ ಸಾವಿರಾರು ಲಾಭರಹಿತ ಪಿರಮಿಡ್ ಆಧ್ಯಾತ್ಮಿಕ ಧ್ಯಾನ ಕೇಂದ್ರಗಳು ಹುಟ್ಟಿಕೊಂಡವು. ಲಾಭೋದ್ದೇಶರಹಿತ ಈ ಸಂಸ್ಥೆಗಳು ಸ್ಥಳೀಯ ಪಿರಮಿಡ್ ಮಾಸ್ಟರ್ ರ ಸಮೂಹಗಳನ್ನು ರಚನೆ ಮಾಡಿ ಅವರ ಮೂಲಕ ಆಧ್ಯಾತ್ಮಿಕ ಪ್ರಯಾಣದಲ್ಲಿ ಎಲ್ಲರೂ ಮುಂದೆ ಸಾಗಲು ಮತ್ತು ಧ್ಯಾನವನ್ನು ಸಕ್ರಮವಾಗಿ ಎಲ್ಲರಿಗೂ ತಿಳಿಸಲು ಸಹಾಯ ಮಾಡುತ್ತಿವೆ. ಅವರ ಸಕ್ರಿಯ ಸಹಾಯದಿಂದ, ಇಲ್ಲಿಯವರೆಗೆ ಸುಮಾರು 50,000 ಹಳ್ಳಿಗಳಿಗೆ ಧ್ಯಾನವನ್ನು ಹರಡಲಾಗಿದೆ. ಪ್ರಾಥಮಿಕವಾಗಿ ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ, ತಮಿಳುನಾಡು ಮತ್ತು ಭಾರತದ ಇತರ ರಾಜ್ಯಗಳಿಗೆ ಧ್ಯಾನವನ್ನು ಪ್ರಸಾರ ಮಾಡಲಾಗಿದೆ. ಪ್ರಪಂಚದಾದ್ಯಂತ 50 ಕ್ಕೂ ಹೆಚ್ಚು ದೇಶಗಳಲ್ಲಿ ಪಿರಮಿಡ್ ಮಾಸ್ಟರ್ಸ್ ನೆಲೆಸಿದ್ದಾರೆ ಮತ್ತು ಇದು ನಿರಂತರವಾಗಿ ಬೆಳೆಯುತ್ತಿದೆ.

## ಆಧ್ಯಾತ್ಮಿಕ ವಿಜ್ಞಾನ ಸಾಹಿತ್ಯಕ್ಕೆ ಕೊಡುಗೆಗಳು

ಪತ್ರೀಜಿಯವರು ಮಹಾನ್ ಓದುಗರಾಗಿದ್ದಾರೆ! ತಮ್ಮ ಧ್ಯಾನದ ಆರಂಭಿಕ ವರ್ಷಗಳಲ್ಲಿ ಹೈದರಾಬಾದಿನ ಅನೇಕ ಗ್ರಂಥಾಲಯಗಳಿಗೆ ಭೇಟಿ ನೀಡಿ ಅನೇಕ ಪುಸ್ತಕಗಳನ್ನು ಓದಿದ್ದಾರೆ. ನಂತರದ ದಶಕಗಳಲ್ಲಿ ಆಧ್ಯಾತ್ಮಿಕ ಶಾಸ್ತ್ರಕ್ಕೆ ಸಂಬಂಧಿಸಿದ ಎಲ್ಲಾ ಪುಸ್ತಕಗಳ ಕುರಿತು ಆಳವಾದ ಅಧ್ಯಯನ ಮಾಡುವುದರೊಂದಿಗೆ ಇವರು ಹಲವಾರು ಹಳೆಯ ಮತ್ತು ಹೊಸ ಯುಗದ ಮಹಾನ್ ಗುರುಗಳು, ಪೂರ್ವ ಮತ್ತು ಪಶ್ಚಿಮದ ಲೇಖಕರು ಬರೆದ ಜ್ಞಾನೋದಯ ಮತ್ತು ಆಧ್ಯಾತ್ಮಿಕತೆಯ ಸಂಬಂಧಿಸಿದ ಒಂದು ಲಕ್ಷ ಪುಸ್ತಕಗಳನ್ನು ಓದಿದ್ದಾರೆ. ಪತ್ರೀಜಿಯವರು ತೆಲುಗು ಮತ್ತು ಭಾರತದ ಇತರ ಭಾಷೆಗಳಲ್ಲಿ ಹಲವಾರು ಪುಸ್ತಕಗಳನ್ನು ಬರೆದಿದ್ದು, ಆಡಿಯೋ-ವಿಡಿಯೋ ಸಂಭಾಷಣೆಗಳನ್ನು ನೀಡಿದ್ದಾರೆ. PMC ಚಾನೆಲ್ ಗಳ ಮೂಲಕ ಧ್ಯಾನ ಸಾಧಕರಿಗೆ ನೇರವಾಗಿ ಸಂದೇಶಗಳನ್ನು ಬಿತ್ತರಿಸಿದ್ದಾರೆ. ಇವರು ವಿಶ್ವ ಆಧ್ಯಾತ್ಮಿಕ ಗುರುಗಳ ಸಾಹಿತ್ಯವನ್ನು ಓದುವುದನ್ನು ಸಕ್ರಿಯವಾಗಿ ಉತ್ತೇಜಿಸುತ್ತಾರೆ. ಇಂಗ್ಲೀಷ್‌ನಲ್ಲಿ ಬರೆದ ಇತರ ವಿಶ್ವಗುರುಗಳ ಆಧ್ಯಾತ್ಮಿಕ ವಿಜ್ಞಾನ ಪುಸ್ತಕಗಳನ್ನು, ಹಲವಾರು ಭಾರತೀಯ ಭಾಷೆಗಳಿಗೆ ಭಾಷಾಂತರಿಸಲು ಅನೇಕ ಪಿರಮಿಡ್ ಮಾಸ್ಟರ್ ಗಳಿಗೆ ಪ್ರೇರಣೆ ನೀಡಿದ್ದಾರೆ. ಪತ್ರೀಜಿಯವರು ಹಲವಾರು ಮಾಸಿಕ ಮತ್ತು ದ್ವೈ ಮಾಸಿಕ ಆಧ್ಯಾತ್ಮಿಕ ನಿಯತ ಕಾಲಿಕೆಗಳನ್ನು ಭಾರತದ 20 ಭಾಷೆಗಳಲ್ಲಿ ಪ್ರಕಟಿಸಲು ಮಾರ್ಗದರ್ಶನ ನೀಡುತ್ತಿದ್ದಾರೆ. ಈ ನಿಯತಕಾಲಿಕೆಗಳಲ್ಲಿ ಇಂಗ್ಲೀಷ್ ಭಾಷೆಯಲ್ಲಿರುವ ಸ್ಪಿರಿಚ್ಯುವಲ್ ಇಂಡಿಯಾ ಮತ್ತು ಸ್ಪಿರಿಚ್ಯುವಲ್ ಸೈನ್ಸ್, ತೆಲುಗು ಭಾಷೆಯಲ್ಲಿ 'ಧ್ಯಾನ ಜಗತ್', ಕನ್ನಡ ಭಾಷೆಯಲ್ಲಿ 'ಧ್ಯಾನ ಕಸ್ತೂರಿ' ಮತ್ತು ಹಿಂದೀ ಭಾಷೆಯಲ್ಲಿ 'ಪಿರಮಿಡ್ ಧ್ಯಾನ ಜಗತ್' ಹೀಗೆ ಹಲವಾರು ಬೇರೆ-ಬೇರೆ ಭಾಷೆಗಳಲ್ಲಿ ಇವೆ. ಪತ್ರೀಜಿಯವರ ಮಾರ್ಗದರ್ಶನದಲ್ಲಿ, ಅಪಾರ ಪ್ರಮಾಣದ ಆಧ್ಯಾತ್ಮಿಕ ವಿಜ್ಞಾನ ಸಾಹಿತ್ಯ, ನಿಯತಕಾಲಿಕೆಗಳು, ಪುಸ್ತಕಗಳು ಮತ್ತು ಆಡಿಯೋ ವೀಡಿಯೋಗಳ ಮೂಲಕ ವಿವಿಧ ಭಾಷೆಗಳಲ್ಲಿ ಆಧ್ಯಾತ್ಮಿಕ ವಿಜ್ಞಾನ ಸಾಹಿತ್ಯ ಪ್ರದರ್ಶಿಸಲ್ಪಡುತ್ತಿದೆ.

**ರಾತ್ರಿಯ ನಿದ್ದೆ ಹೇಗೆ ನಮಗೆ ವರವಾಗುವುದೋ ಸಾವು ಕೂಡಾ ಈ ಜೀರ್ಣವಾದ ಶರೀರಕ್ಕೆ ಮುಖ್ಯ.**
**ದೇಹತ್ಯಾಗ ಎಂದರೆ ಹರಿದ ಬಟ್ಟೆ ತೆಗೆದು ಹೊಸ ಬಟ್ಟೆಯನ್ನು ಧರಿಸಿದಂತೆ !**
**~ ಬ್ರಹ್ಮರ್ಷಿ ಪಿತಾಮಹ ಪತ್ರೀಜಿ**



# ಸಸ್ಯಾಹಾರದ ಕುರಿತು ಜಾಗೃತಿ ಮೂಡಿಸುವುದು




ಸಸ್ಯಾಹಾರವನ್ನು ಪ್ರೋತ್ಸಾಹಿಸುವುದು ಪತ್ರೀಜಿಯವರ ಹೃದಯಕ್ಕೆ ತುಂಬಾ ಅಪ್ಯಾಯಮಾನವಾದ ವಿಷಯವಾಗಿದೆ. ಅವರ ಮಾತಿನಲ್ಲಿ ಹೇಳುವುದಾದರೆ, **‘ಅಹಿಂಸೆ ಮತ್ತು ಕೊಲ್ಲದಿರುವುದನ್ನು ಪ್ರತಿಪಾದಿಸದ ಯಾವುದೇ ಆಧ್ಯಾತ್ಮಿಕ ಅಭ್ಯಾಸವು, ಸರಿಯಾದ ಆಧ್ಯಾತ್ಮಿಕ ಅಭ್ಯಾಸವಲ್ಲ.’**

ಧ್ಯಾನದಲ್ಲಿ ಅತ್ಯುನ್ನತ ಸ್ಥಿತಿಯನ್ನು ಸಾಧಿಸಬೇಕೆಂದರೆ, ಪ್ರತಿಯೊಬ್ಬರೂ ಮೊದಲು ಸಸ್ಯಾಹಾರಿಯಾಗಿರಬೇಕೆಂದು ಖಡಾಖಂಡಿತವಾಗಿ ಹೇಳುತ್ತಾ, ಸಸ್ಯಾಹಾರಕ್ಕೆ ಸರ್ವೋನ್ನತ ಪ್ರಾಮುಖ್ಯತೆಯನ್ನು ನೀಡಿದ್ದಾರೆ.

ಈ ನಿಟ್ಟಿನಲ್ಲಿ ಸಾಗುತ್ತಾ, ಪತ್ರೀಜಿಯವರು ಭಾರತದ ಉದ್ದಗಲಕ್ಕೂ ಸಾವಿರಾರು ಸಸ್ಯಾಹಾರ ರ‍್ಯಾಲಿಗಳನ್ನು ಆಯೋಜಿಸಿದರು ಮತ್ತು ಲಕ್ಷಾಂತರ ಕರಪತ್ರಗಳನ್ನು ಹಂಚಿದರು. ‘ಅಹಿಂಸಾ ಪರಮೋಧರ್ಮಃ’ ಅಂದರೆ **“ಅಹಿಂಸೆಯ ಆಚರಣೆಯು ಪ್ರತಿಯೊಬ್ಬರ ಸರ್ವೋಚ್ಚ ಜವಾಬ್ದಾರಿಯಾಗಿದೆ”** ಎಂದು ತಮ್ಮ ಎಲ್ಲಾ ಧ್ಯಾನ ಅಧಿವೇಶನಗಳಲ್ಲಿ ಅದರ ಮಹತ್ವವನ್ನು ಬೋಧಿಸುತ್ತಾ ನಿರಂತರ ಜಾಗೃತಿ ಮೂಡಿಸಿದರು.




**ದೇಹದಿಂದ ಹೊರಬಂದ ಆತ್ಮ ಮರಳಿ ದೇಹ ಸೇರದಿದ್ದರೆ ಅದು ಸಾವು. ನಿದ್ರೆ ಎಂದರೆ ಶರೀರದಿಂದ ಹೊರಬಂದ ಜೀವಾತ್ಮ ಮತ್ತೆ ಬಂದು ಸೇರುತ್ತಾನೆ. ಎಷ್ಟು ರಾತ್ರಿ ನಿದ್ರಿಸಿ ಹೊರ ಹೋಗಿದ್ದೆವೋ ಅಷ್ಟು ಹಗಲುಗಳಲ್ಲಿ ಮರಳಿ ಬಂದು ಜೀವಿಸಿದ್ದೇವೆ.**

**~ ಬ್ರಹ್ಮರ್ಷಿ ಪಿತಾಮಹ ಪತ್ರೀಜಿ**



## ಪಿರಮಿಡ್‌ಗಳ ಸ್ಥಾಪನೆ




ಪತ್ರೀಜಿಯವರು ಪಿರಮಿಡ್‌ಗಳ ರಚನೆಯ ಹಿಂದಿನ ವಿಜ್ಞಾನವನ್ನು ಅರಿತಿದ್ದರು. ಅವರು ಅಧ್ಯಯನ ಮತ್ತು ಪ್ರಯೋಗಳ ಮೂಲಕ ಪಿರಮಿಡ್‌ಗಳ ಶಕ್ತಿಯನ್ನು ಅರ್ಥಮಾಡಿಕೊಂಡಿದ್ದರು ಮತ್ತು ಧ್ಯಾನಕ್ಕಾಗಿ ಪಿರಮಿಡ್‌ಗಳ ಶಕ್ತಿಯನ್ನು ಪ್ರಚಾರ ಮಾಡಿದ್ದಾರೆ. ಅವರು ಪ್ರಪಂಚದಾದ್ಯಂತ ಧ್ಯಾನಕ್ಕಾಗಿ ಸಾವಿರಾರು ಪಿರಮಿಡ್‌ಗಳನ್ನು ನಿರ್ಮಿಸಲು ಪ್ರೇರೇಪಿಸಿದ್ದಾರೆ.

ಬೆಂಗಳೂರಿನ ಸಮೀಪದಲ್ಲಿರುವ ಪಿರಮಿಡ್ ವ್ಯಾಲಿಯಲ್ಲಿರುವ ಮೈತ್ರೇಯ ಬುದ್ಧ ಮೆಗಾ ಪಿರಮಿಡ್, ಮತ್ತು ಹೈದರಾಬಾದಿನ ಬಳಿಯಿರುವ ಕೈಲಾಸಪುರಿಯಲ್ಲಿರುವ ಮಹೇಶ್ವರ ಮಹಾ ಪಿರಮಿಡ್. ಇನ್ನೂ ಹಲವಾರು ಪಿರಮಿಡ್‌ಗಳ ಒಳಗಡೆ ಧ್ಯಾನ ಮಾಡುವಂತಹ ಸಾವಿರಾರು ಜನರು ಗುಣಮುಖರಾಗಿದ್ದು ಮತ್ತು ಜ್ಞಾನೋದಯದ ಅನುಭವವನ್ನು ಹೊಂದಿದ್ದಾರೆ. ಇದರ ಜೊತೆಗೆ ಭಾರತ ಮತ್ತು ಇತರ ದೇಶಗಳಲ್ಲಿ, ಹಲವಾರು ಹಳ್ಳಿಗಳು, ಪಟ್ಟಣಗಳು ಮತ್ತು ನಗರಗಳಲ್ಲಿ ಸಾವಿರಾರು ಸಣ್ಣ ಸಣ್ಣ ಪಿರಮಿಡ್‌ಗಳನ್ನು ಸ್ಥಾಪನೆ ಮಾಡಿದ್ದಾರೆ. ಮನೆಯ ಮೇಲ್ಛಾವಣಿಯ ಮೇಲೆ ಧ್ಯಾನಕ್ಕಾಗಿ ಅಸಂಖ್ಯಾತ ಪಿರಮಿಡ್‌ಗಳನ್ನು ಸ್ಥಾಪನೆ ಮಾಡಿದ್ದಾರೆ.

ಪತ್ರೀಜಿಯವರು ಬೆಂಗಳೂರಿನ ಸಮೀಪದಲ್ಲಿ 'ಪಿರಮಿಡ್ ವ್ಯಾಲಿ ಇಂಟರ್ ನ್ಯಾಷನಲ್'ಅನ್ನು ಸ್ಥಾಪಿಸಿದ್ದಾರೆ. ಇದು ಒಂದು ಅಮೋಘವಾದ ಅಂತರ್ ರಾಷ್ಟ್ರೀಯ ಧ್ಯಾನ ಕೇಂದ್ರವಾಗಿದ್ದು, ಗುಣಮಟ್ಟದ ವಸತಿ ಸೌಕರ್ಯಗಳನ್ನು ಹೊಂದಿದೆ ಮತ್ತು ವ್ಯಕ್ತಿಯ ಆಳವಾದ ವೈಯಕ್ತಿಕ ರೂಪಾಂತರಣ ಕೇಂದ್ರವಾಗಿದೆ. ವರ್ಷಪೂರ್ತಿ ಹಲವಾರು ಹೊರರಾಜ್ಯಗಳಿಂದ ಹೊರದೇಶಗಳಿಂದ ಲಕ್ಷಾಂತರ ಸಂದರ್ಶಕರು ಭೇಟಿ ನೀಡಿ, ಈ ಕೇಂದ್ರದಿಂದ ಧ್ಯಾನ ಮತ್ತು ಆಧ್ಯಾತ್ಮಿಕ ಸೇವೆಯ ಪ್ರಯೋಜನ ಪಡೆಯುತ್ತಿದ್ದಾರೆ.

ಹೈದರಾಬಾದಿನ ಸಮೀಪದಲ್ಲಿ 'ಕೈಲಾಸಪುರಿ ಧ್ಯಾನ ಆಶ್ರಮ'ವಿದೆ. 'ಮಹೇಶ್ವರ ಮಹಾ ಪಿರಮಿಡ್' ಎಂದು ಕರೆಯಲ್ಪಡುವ, ಇದು ಧ್ಯಾನಕ್ಕಾಗಿ ನಿರ್ಮಿಸಿದ ವಿಶ್ವದ ಅತಿದೊಡ್ಡ  ಪಿರಮಿಡ್ ಆಗಿದೆ. ವಾರ್ಷಿಕ 'ಧ್ಯಾನ ಮಹಾ ಚಕ್ರಗಳನ್ನು ಆಯೋಜಿಸುತ್ತಾ ಲಕ್ಷಾಂತರ ಜನರಿಗೆ ಸೇವೆ ಸಲ್ಲಿಸುತ್ತಿದೆ.

ಭಾರತದಾದ್ಯಂತ ಹಲವಾರು ಇತರ ವಸತಿ ಧ್ಯಾನ ಕೇಂದ್ರಗಳು ಮತ್ತು ಕ್ಯಾಂಪಸ್‌ಗಳು ಆಧ್ಯಾತ್ಮಿಕ ಪ್ರಗತಿಯನ್ನು ಹೊಂದಲು ಸಹಾಯ ಮಾಡುತ್ತಿವೆ. ಚಿತ್ತೂರ್ ಬಳಿ ಇರುವ 'ಪಿರಮಿಡ್ ಜೇತವನಂ', ಶ್ರೀಶೈಲ ಬಳಿಯಿರುವ 'ಅಷ್ಟಾದಶ ಪಿರಮಿಡ್ ಧ್ಯಾನ ಕೇಂದ್ರ,' ಕರ್ನೂಲ್‌ನಲ್ಲಿರುವ 'ಬುದ್ಧ ಪಿರಮಿಡ್ ಧ್ಯಾನ ಕೇಂದ್ರ' ರಾಜಮಂಡ್ರಿ ಬಳಿಯಿರುವ 'ಶ್ರೀ ವಶಿಷ್ಠ ಗೌತಮಿ ಪಿರಮಿಡ್ ಧ್ಯಾನ ಮಹಾಕ್ಷೇತ್ರ,' ವೆಲ್ಲೂರು ಬಳಿಯಿರುವ 'ಅಗಸ್ತ್ಯ ಮಹಾ ಪಿರಮಿಡ್ ಕ್ಷೇತ್ರಂ' ಮತ್ತು ಖಮ್ಮಂ ಬಳಿಯಿರುವ 'ಕಾಸ್ಮಿಕ್ ವ್ಯಾಲಿ ಪಿರಮಿಡ್ ಕ್ಯಾಂಪಸ್' ಕೆಲವು ಗಮನಾರ್ಹ ಆಶ್ರಮಗಳಾಗಿವೆ.

## ಪಿರಮಿಡ್ ಮೆಡಿಟೇಷನ್ ಚಾನೆಲ್ – PMC

ಪತ್ರೀಜಿಯವರ ಸ್ಫೂರ್ತಿ ಮತ್ತು ಮಾರ್ಗದರ್ಶನದೊಂದಿಗೆ PSSM ನ ಪ್ರಮುಖ ಸಂದೇಶಗಳನ್ನು ಪ್ರಚಾರ ಮಾಡಲು 2017 ರಲ್ಲಿ 'ಪಿರಮಿಡ್ ಮೆಡಿಟೇಶನ್ ಚಾನೆಲ್-PMC' ಎಂಬ ಮೆಗಾ ಧ್ಯಾನ ವಿಡಿಯೋ ಚಾನೆಲ್ ಯೋಜನೆಯನ್ನು ಪ್ರಾರಂಭಿಸಲಾಯಿತು. ಕಳೆದ ನಾಲ್ಕು ವರ್ಷಗಳಲ್ಲಿ ಈ ಚಾನಲ್ ಕುರಿತು ಸಾರ್ವಜನಿಕ ಆಸಕ್ತಿ ಮತ್ತು ಒಲವು ಚಿಮ್ಮಿತು.

ಹಿಂದಿ (ಪಿ. ಎಮ್. ಸಿ. ಹಿಂದಿ), ತೆಲುಗು, ಕನ್ನಡ, ತಮಿಳು ಮುಂತಾದ ಭಾರತ ಮತ್ತು ಪ್ರಪಂಚದ 25ಕ್ಕೂ ಹೆಚ್ಚು ಭಾಷೆಗಳಲ್ಲಿ ಚಾನೆಲ್‌ಗಳನ್ನು ನಿರ್ವಹಿಸುವ ಈ ಯೋಜನೆಯಿಂದ ಲಕ್ಷಾಂತರ ಜನರು ಪ್ರಯೋಜನ ಪಡೆಯುತ್ತಿದ್ದಾರೆ. ಲಕ್ಷಾಂತರ ಜನರು ಈ ಚಾನೆಲ್‌ಗಳಿಗೆ ಚಂದಾದಾರರಾಗಿದ್ದಾರೆ ಮತ್ತು ಲಭ್ಯವಿರುವ ಎಲ್ಲಾ ಆಧ್ಯಾತ್ಮಿಕ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದಾರೆ.

PMC ప్రతి క్షణం ... సత్య దర్శనం

PMC ಕನ್ನಡ

PMC हिन्दी

PMC ENGLISH

PMC தமிழ்

ರಾತ್ರಿವೇಳೆ ನಿದ್ರಿಸದಿದ್ದರೆ  ಹಗಲು ನಿಸ್ತೇಜವಾಗಿರುತ್ತದೆ, ರಾತ್ರಿ ನಿದ್ರಿಸಿದರೆ ಹಗಲು ಲವಲವಿಕೆ ಇರುತ್ತದೆ. ಭೂಮಿಯ ಮೇಲೆ ಸಾವು ಇಲ್ಲದಿದ್ದರೆ, ಈ ಭೂಮಂಡಲವೆಲ್ಲ ವಯಸ್ಸಾದ, ಅನಾರೋಗ್ಯದ ಶರೀರಗಳಿಂದ ಕೂಡಿರುತ್ತಿತ್ತು. ಸಾವು ದೇಹಕ್ಕೆ ವರದಾನ.     ~ ಬ್ರಹ್ಮರ್ಷಿ ಪಿತಾಮಹ ಪತ್ರೀಜಿ



# ಪ್ರಶಸ್ತಿಗಳು ಮತ್ತು ಮನ್ನಣೆಗಳು

ಪತ್ರೀಜಿಯವರ ಮಾನವೀಯತೆ, ಅವರ ನಿಸ್ವಾರ್ಥ ಮತ್ತು ಅತ್ಯುನ್ನತ ಸೇವೆಯನ್ನು ಗುರುತಿಸಿ ಅವರಿಗೆ ಹಲವಾರು ಪ್ರಶಸ್ತಿಗಳನ್ನು ಪ್ರಧಾನ ಮಾಡಲಾಗಿದೆ.

- ದ ಟೈಮ್ಸ್ ಆಫ್ ಇಂಡಿಯಾ ಗ್ರೂಪ್ಸ್ ಸ್ಪೀಕಿಂಗ್ ಟ್ರೀ ಫೌಂಡೇಷನ್ ದಿಂದ 'ಉತ್ತಮ ಆಧ್ಯಾತ್ಮಿಕತೆ ಮತ್ತು ಯೋಗಕ್ಷೇಮ' ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿ 'ಆನಾಪಾನಸತಿ ಧ್ಯಾನ ಮತ್ತು ಪಿರಮಿಡ್ ಶಕ್ತಿಯ ಬಳಕೆ'ಯ ಕುರಿತು ತಿಳಿಸಿಕೊಟ್ಟಿದ್ದಕ್ಕಾಗಿ ಈ ಪ್ರಶಸ್ತಿ ದೊರೆತಿದೆ.
- 2006 ರಲ್ಲಿ ವಾರ್ಧಾ(ಮಹಾರಾಷ್ಟ್ರ) ಸೇವಾಗ್ರಾಮ ಮಹಾತ್ಮಾಗಾಂಧಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 'ಆರೋಗ್ಯ ಧಾಮ' ವು ಆಯೋಜಿಸಿದ ಸಮಗ್ರ ಜೀವನ ಶಾಸ್ತ್ರ ಮತ್ತು ಅದರ ಜಾಗತಿಕ ಅನ್ವಯದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ 'ಜೀವಮಾನ ಸಾಧನೆ ಪ್ರಶಸ್ತಿ' ನೀಡಿ ಗೌರವಿಸಲಾಗಿದೆ.
- ಧ್ಯಾನ ಮತ್ತು ಆಧ್ಯಾತ್ಮಿಕ ಮಾರ್ಗದರ್ಶನ ಕ್ಷೇತ್ರದಲ್ಲಿ ಅವರ ನಂಬಲಾಗದ (unbelievable) ಸಾಧನೆಗಳಿಗಾಗಿ 2019 ರಲ್ಲಿ ವಂಡರ್ ಬುಕ್ ಆಫ್ ವರ್ಲ್ಡ್ ರಿಕಾರ್ಡ್ಸ್ ಗೆ ಪ್ರವೇಶ, ಇವರು ಏಕಕಾಲದಲ್ಲಿ 10,000ಕ್ಕೂ ಹೆಚ್ಚು ಜನರಿಗೆ ಧ್ಯಾನ ತರಗತಿಗಳನ್ನು ನಡೆಸಿದ್ದಕ್ಕಾಗಿ ಈ ಪ್ರಶಸ್ತಿ ನೀಡಲಾಗಿದೆ.
- 2020 ರಲ್ಲಿ ಯುನೈಟೆಡ್ ಥಿಯೊಲಾಜಿಕಲ್ ರೀಸರ್ಚ್ ಯೂನಿವರ್ಸಿಟಿಯಿಂದ ಗೌರವ ಡಾಕ್ಟರೇಟ್ ಪ್ರಶಸ್ತಿ, 2021 ರಲ್ಲಿ ವೇದಿಕ್ ವೆಲ್‌ನೆಸ್ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿ ದೊರೆತಿದೆ.
- ತಿರುಪತಿಯ ಗುರುಗಳಿಂದ 'ಬ್ರಹ್ಮರ್ಷಿ', ಮತ್ತು ಹಿಮಾಲಯ ಧ್ಯಾನದ ಗುರುಗಳಿಂದ 'ಬ್ರಹ್ಮರ್ಷಿ ಪಿತಾಮಹ' ಎಂಬ ಬಿರುದುಗಳು ದೊರೆಕಿವೆ.




# ಮಹಾಪರಿನಿರ್ವಾಣ


ಪರಕೀಯರ ದಬ್ಬಾಳಿಕೆಯಿಂದ ಭಾರತೀಯರು ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿರುವಾಗ, ಉನ್ನತ ಲೋಕದ ಆತ್ಮವೊಂದು ಮಹಾತ್ಮಾ ಗಾಂಧೀಜಿಯವರ ರೂಪದಲ್ಲಿ ಅವತರಿಸಿ ಸ್ವಾತಂತ್ರ್ಯ ಆಂದೋಲನದ ನೇತೃತ್ವ ವಹಿಸಿಕೊಂಡಂತೆ, ಭೌತಿಕ ಪ್ರಪಂಚದ ಜಾಲದಲ್ಲಿ ಸಿಲುಕಿ ನಲುಗುತ್ತಿದ್ದ ಆತ್ಮಗಳೆಲ್ಲ ಮುಕ್ತಿಗಾಗಿ ಹಂಬಲಿಸಿದಾಗ, ಅತ್ಯುನ್ನತ ಲೋಕದ ಆತ್ಮವು ಭೂಮಿಯ ಬದಲಾವಣೆಯ ಈ ನಿರ್ಣಾಯಕ ಸಮಯದಲ್ಲಿ ಬ್ರಹ್ಮರ್ಷಿ ಪಿತಾಮಹ ಪತ್ರೀಜಿಯವರ ರೂಪದಲ್ಲಿ ಅವತರಿಸಿ ಆತ್ಮ ಸ್ವಾತಂತ್ರ್ಯ ಆಂದೋಲನದ ನೇತೃತ್ವ ವಹಿಸಿಕೊಂಡಿತು.

1947 ನವೆಂಬರ್ 11 ರಂದು ಭೂಮಿಗೆ ಅವತರಿಸಿದ ಈ ಮಹೋನ್ನತ ಆತ್ಮವು ... ಲೇಸರ್ ಕಿರಣದಂತಹ ಏಕಾಗ್ರತೆಯ ಆನಾಪಾನಸತಿ ಧ್ಯಾನ, ಪಿರಮಿಡ್ ಗಳ ಸಹಾಯದಿಂದ ಪ್ರಾಣಶಕ್ತಿಯ ವರ್ಧನ, ಶಾಕಾಹಾರದಿಂದ ಅಹಿಂಸಾ ಮಹಾಮಾರ್ಗದಲ್ಲಿ ಸ್ವಾಧ್ಯಾಯದ ಶಕ್ತಿಯಿಂದ ಮುನ್ನಡೆದು ಮನುಕುಲಕ್ಕೆ ಮಾರ್ಗದರ್ಶಕರಾಗುವ ಪಿರಮಿಡ್ ಮಾಸ್ಟರ್ ರ ಮಹಾಪಡೆಯನ್ನು ನಿರ್ಮಿಸಿ ... ಕಳೆದ ತಿಂಗಳು ಜುಲೈ 24 ರಂದು ಭೌತಿಕ ದೇಹದ ಸೀಮಿತತೆಯನ್ನು ತೊರೆದು ಅಸೀಮ ಬೆಳಕಾದರು. ಪತ್ರೀಜಿಯವರು ಕೇವಲ ಯುಗಪುರುಷರಲ್ಲ, ಆಧ್ಯಾತ್ಮಿಕತೆ, ಪಿರಮಿಡ್ ಶಕ್ತಿ, ಶಾಕಾಹಾರ ಜೀವನ ವಿಧಾನ ಮತ್ತು ಸ್ವಾಧ್ಯಾಯದ ಮಹದಾನಂದವನ್ನು ಜನಜೀವನದಲ್ಲಿ ಸುಲಭಗೊಳಿಸಿದರು. ಜೊತೆಗೆ ಅಕ್ಷರಶ: "ವಸುಧೈವ ಕುಟುಂಬಕಂ" ಸ್ಥಿತಿಯನ್ನು ನಿರ್ಮಿಸಿದ ನವಯುಗ ನಿರ್ಮಾಪಕರು, ಯುಗ ಪ್ರವರ್ತಕರು !

ಗೌತಮ ಬುದ್ಧನು ಆನಂದನಿಗೆ "ಅಪ್ಪೋ ದೀಪೋ ಭವ" ಎಂದು ಮಾರ್ಗದರ್ಶನ ಮಾಡಿ ದೇಹ ಬಿಟ್ಟರೆ; ಬ್ರಹ್ಮರ್ಷಿ ಪಿತಾಮಹ ಪತ್ರೀಜಿಯವರು ದೇಹ ಬಿಡುವ ಮೂಲಕ ಏನೂ ಹೇಳದೆ ನಮಗೆಲ್ಲಾ "ಅಪ್ಪೋ ದೀಪೋ ಭವ" ಸ್ಥಿತಿಯನ್ನು ಮನಗಾಣಿಸಿದರು !
ಪರಮ ಕೃತಜ್ಞತೆಯೊಂದಿಗೆ, ಅವರು ಹಾಕಿಕೊಟ್ಟ ಮಾರ್ಗದಲ್ಲಿ ಪರಮ ಪಾವನ ಸ್ಥಿತಿಯಲ್ಲಿ ಸಾಗುವುದೊಂದೆ ನಾವು ಅವರಿಗೆ ಸಲ್ಲಿಸುವ ಗುರು ಕಾಣಿಕೆ, ಗುರುತರ ಕಾಣಿಕೆ.



**ಜೀವಾತ್ಮ ಶರೀರದಲ್ಲಿ ಪ್ರವೇಶಿಸಿದಾಗ ಶರೀರ ಜೀವಿಸುತ್ತದೆ**
**ಜೀವಾತ್ಮ ನಿಷ್ಕ್ರಮಿಸಿದ ಮೇಲೆ ಶರೀರ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಜಡವಾಗುತ್ತದೆ. ಜೀವಾತ್ಮವೇ ಶರೀರದ ಚೈತನ್ಯ.**
**~ ಬ್ರಹ್ಮರ್ಷಿ ಪಿತಾಮಹ ಪತ್ರೀಜಿ**



# "ಗುರಿಯೇ ಗುರು"



"ಗುರು"  ಎಂದರೆ ಒಬ್ಬ ವ್ಯಕ್ತಿಯಲ್ಲ "ಗುರು" ಎನ್ನುವುದು ಉನ್ನತ 'ತತ್ವ'.
ಒಬ್ಬ ಜಿಜ್ಞಾಸು ಶ್ರೀ ರಮಣ ಮಹರ್ಷಿಯವರ ಬಳಿಗೆ ಹೋಗಿ "ಗುರು ಎಂದರೆ ಏನೆಂದು ವಿವರಿಸಿ ಸ್ವಾಮಿ"? ಎಂದು ಕೇಳಿದಾಗ  ಅವರು "ನಿನ್ನ ಗುರಿಯೇ ನಿನ್ನ 'ಗುರು" ಎಂದು ಹೇಳಿದರು.

## 'ಗುರಿ'ಎಂದರೆ 'ಶ್ರದ್ಧೆ'!

ಬೋಧಿಸುವವನಿಗೆ ಎಷ್ಟು ಶ್ರದ್ಧೆಯಿರಬೇಕೋ .. ಕಲಿತುಕೊಳ್ಳುವವನಿಗೆ ಅದಕ್ಕಿಂತ ಹೆಚ್ಚಾದ ಶ್ರದ್ಧೆಯಿರಬೇಕು ಬೋಧಿಸುವವನಿಗೆ ತಾನು ತಿಳಿದುಕೊಂಡ ವಿಷಯಗಳನ್ನು ಅನಾಯಾಸವಾಗಿ ತಿಳಿಸುತ್ತಿರುತ್ತಾನೆ.
ಕಲಿತುಕೊಳ್ಳುವವನು ಮಾತ್ರ ಅದನ್ನು ತುಂಬಾ ಶ್ರದ್ಧೆಯಿಂದ ಗುರಿ ತಲುಪಲು ಕೇಳಿಸಿಕೊಳುತ್ತಾನೆ.
ತಿಳಿದದ್ದು ಹೇಳುವುದಕ್ಕಿಂತ ತಿಳಿಯದಿರುವುದನ್ನು  ಶ್ರದ್ಧೆಯಿಂದ ತಿಳಿದುಕೊಳ್ಳುವುದೇ ಉನ್ನತವಾದದ್ದು!
ಎಷ್ಟು ಕಲಿತುಕೊಂಡರೆ ಅಷ್ಟು ಜ್ಞಾನ. ಆದ್ದರಿಂದ 'ಗುರಿಯೇ ಗುರು'.

## ಗುರಿಯೇ  ನಮ್ಮ ನಿಜವಾದ ಗುರುತತ್ತ್ವ!

ಋಷಿಗಳು ಈ ತತ್ತ್ವವನ್ನು ಬೋಧಿಸಲು ..  ದೇವರುಗಳ ಹೆಸರಿನೊಂದಿಗೆ ಅನೇಕ ವಿಧವಾದ ಪಾತ್ರಗಳನ್ನು ಸೃಷ್ಟಿಸಿ .. "ಅಂತಹ ತತ್ತ್ವಕ್ಕೆ ನಮಸ್ಕಾರ" ಎಂದು ಹೇಳಿದರು.
ಆದರೆ ಕಾಲಕ್ರಮೇಣ ನಾವು ನಿಜ ತತ್ತ್ವವನ್ನು ಬಿಟ್ಟುಹಾಕಿ, ಕೇವಲ ಅವರು ಉದಾಹರಣೆಯಾಗಿ ತೋರಿಸಿದ ಚಿತ್ರಗಳನ್ನು, ಮೂರ್ತಿಗಳನ್ನು ಮಾತ್ರ ಆರಾಧಿಸುತ್ತಾ ಬಂದಿದ್ದೇವೆ.

ಇಲ್ಲಿಯವರೆಗೂ ನಮಗೆ ತಿಳಿಯದ್ದನ್ನು ಶ್ರದ್ಧೆಯಿಂದ, ಗುರಿಯಿಂದ ತಿಳಿದುಕೊಂಡ ಮೇಲೆ .. ಇನ್ನು ಅದನ್ನು ಆಚರಣೆಯ ಮೂಲಕ  ಅಭ್ಯಾಸ ಮಾಡಬೇಕು. ಅದಕ್ಕೆ ಇರುವ  ಏಕೈಕ ಮಾರ್ಗವೇ 'ಶ್ವಾಸದ ಮೇಲೆ ಗಮನ' ..

"ಯಾರಿಗೆ 'ಗುರಿಯ ಕೊರತೆ' ಇದ್ದರೆ ಅದೇ ಅವರಿಗೆ ಶತ್ರು .. ಹಾಗೆಯೇ "ಯಾರಿಗೆ ಗುರಿಯು ಇರುತ್ತದೋ' ಅದೇ ಅವರಿಗೆ ಮಿತ್ರ .. ತಮ್ಮ ಆತ್ಮವನ್ನು ತಮ್ಮ 'ಗುರಿ'ಯಿಂದಲೇ ಉದ್ಧರಿಸಿಕೊಳ್ಳಬೇಕು" ಎಂದು ಭಗವದ್ಗೀತೆಯ ಮೂಲಕ ಶ್ರೀಕೃಷ್ಣ ಪರಮಾತ್ಮ ಸಮಸ್ತ ಮಾನವ ಕುಲಕ್ಕೆ ತಿಳಿಸಿದ್ದಾರೆ.

ಪ್ರತಿಯೊಬ್ಬರೂ ಕೂಡಾ ತಾವೇ ತಮ್ಮಲ್ಲಿರುವ 'ಗುರಿ' ತತ್ತ್ವಕ್ಕೆ .. 'ಶ್ರದ್ಧಾ' ತತ್ತ್ವಕ್ಕೆ .. ಧ್ಯಾನ ಸಾಧನೆಯಿಂದ, ಜ್ಞಾನಾರ್ಜನೆಯಿಂದ ವಿಶೇಷವಾಗಿ ಸಾಣೆ ಹಿಡಿಯುತ್ತಾ ಗುರುವಿನಂತೆ ಬದಲಾಗಬೇಕು. ನಿರಂತರ ಧ್ಯಾನಾಭ್ಯಾಸದಿಂದ ದಿವ್ಯಚಕ್ಷುವನ್ನು ಸಂಪಾದಿಸಿ ಆತ್ಮಸಂದೇಶಗಳನ್ನು ಕೇಳುವಂತಾಗಬೇಕು. ಅವುಗಳನ್ನು ನಿಜ ಜೀವನದಲ್ಲಿ ಅಭ್ಯಾಸ ಮಾಡುತ್ತಾ ಶುಭಾಶುಭಗಳನ್ನು ಸಾಕ್ಷೀಭೂತವಾಗಿ ಗಮನಿಸುತ್ತಿರಬೇಕು. "ಗುರುತತ್ತ್ವ"ದಿಂದ ಕೂಡಿರುವವರಿಗೆಲ್ಲಾ ಧ್ಯಾನ ಪ್ರಣಾಮಗಳು.

**ಸಾವುಗಳಲ್ಲಿ ಮೂರು ವಿಧ. ಮೊದಲನೆಯದು ದೈಹಿಕ ಸಾವು. ಎರಡನೆಯದು ದೇಹ ಶವವಾಗುವುದು. ಆಸ್ಟ್ರಲ್ ಡೆತ್ ಅಥವಾ ಅಂತಿಮ ಮರಣದಲ್ಲಿ ಆತ್ಮಕ್ಕಿಂತ ಅದನ್ನು ಸೂಕ್ಷ್ಮಕವಚ ಎಂದು ಕರೆಯಲಾಗುತ್ತದೆ. ತಾನು ಉತ್ತಮ ಧ್ಯೇಯದಿಂದ ನಿರ್ದೇಶಿಸಿಕೊಂಡ ಮರಣವಾಗಿದ್ದರೆ ಅಲ್ಲಿಂದ ನಾವು ಮಹಾಕಾರಣ ಲೋಕಗಳಿಗೆ ಪ್ರವೇಶಿಸಲು ಅರ್ಹತೆ ಹೊಂದುತ್ತೇವೆ. ಅದು, ಮನುಷ್ಯನು ಜ್ಞಾನೋದಯ ಹೊಂದಿದಾಗ ಮಾತ್ರ ಸಂಭವಿಸುತ್ತದೆ.**

**~ ಬ್ರಹ್ಮರ್ಷಿ ಪಿತಾಮಹ ಪತ್ರೀಜಿ**



# ಪಿರಮಿಡ್ ಆಧ್ಯಾತ್ಮಿಕ ಆಂದೋಲನದ (PSSM)
# 18 ಮಾರ್ಗಸೂಚಿ ತತ್ವಗಳು



1.ಧ್ಯಾನದ ಸರಿಯಾದ ವಿಧಾನ ಎಂದರೆ, ಅದು 'ಆನಾಪಾನಸತಿ'... ಮತ್ತು ಪ್ರತಿಯೊಬ್ಬರಿಗೂ ಈ ವಿಧಾನದಲ್ಲಿಯೇ ಧ್ಯಾನವನ್ನು ಕಲಿಸಬೇಕು.

2. ಸರಿಯಾದ ಆಧ್ಯಾತ್ಮಿಕ ಪುಸ್ತಕಗಳನ್ನು ಓದಿ ಮತ್ತು ಅವುಗಳನ್ನು ಓದಲು ಇತರರನ್ನೂ ಪ್ರೋತ್ಸಾಹಿಸಿ.

3. ಇತರರೊಂದಿಗೆ ನಿಮ್ಮ ಧ್ಯಾನದ ಅನುಭವಗಳನ್ನು ವಿನಿಮಯ ಮಾಡಿಕೊಳ್ಳಿ.

4. ಪ್ರತಿದಿನ ಸಾಕಷ್ಟು ಸಮಯವನ್ನು ಮೌನದಲ್ಲಿ ಕಳೆಯಿರಿ.

5. ಆಳವಾದ ಧ್ಯಾನಕ್ಕೆ ಹುಣ್ಣಿಮೆ ರಾತ್ರಿಗಳನ್ನು ಬಳಸಿಕೊಳ್ಳಿ.

6. ಸಾಧ್ಯವಿದ್ದಷ್ಟೂ ಪಿರಮಿಡ್ ಶಕ್ತಿಯನ್ನು ಧ್ಯಾನಕ್ಕೆ ಬಳಸಿಕೊಳ್ಳಿ.

7. ಔಷಧಿ ಸೇವನೆಯನ್ನು ಬಿಟ್ಟುಬಿಡಿ; ಕೇವಲ ಧ್ಯಾನ-ಚೈತನ್ಯವೊಂದೇ ಗುಣಪಡಿಸುತ್ತದೆ.

8. ಮಾಂಸವನ್ನು ಎಂದಿಗೂ ಸೇವಿಸಬೇಡಿ.. ಮೀನು, ಮೊಟ್ಟೆಯೂ ಸಹ ಬೇಡ.. ಸಸ್ಯಾಹಾರಿಗಳಾಗಿ; ಅಗತ್ಯಕ್ಕೆ ತಕ್ಕಂತೆ ತಿನ್ನಿ..

9. ಪರಿಶುದ್ಧವಾದ ಪ್ರಕೃತಿಯಲ್ಲಿ ಸಾಕಷ್ಟು ಸಮಯವನ್ನು ಕಳೆಯಿರಿ.. ಉದಾಹರಣೆಗೆ ಕಾಡು, ಹುಲ್ಲುಗಾವಲು, ನದಿಗಳು, ಪರ್ವತಗಳು ಇತ್ಯಾದಿ.

10. ಯಾವುದೇ ಆಧ್ಯಾತ್ಮಿಕ ದಿರಿಸುಗಳನ್ನು; 'ಪವಿತ್ರ'ವಾದ ದೈಹಿಕ 'ಗುರುತು'ಗಳನ್ನು ಧರಿಸದಿರುವುದು; ಕರ್ಮಕಾಂಡಗಳನ್ನು ಮಾಡದಿರುವುದು.

11. ಬಾಲ್ಯದಿಂದಲೇ ಮಕ್ಕಳಿಗೆ ಧ್ಯಾನದ ತರಬೇತಿ ನೀಡಿ.

12. ಮಾಸ್ಟರುಗಳಾಗಿ ಬದುಕುವುದನ್ನು ಕಲಿಯಿರಿ ಎಂದಿಗೂ ಶಿಷ್ಯರಾಗಿ ಅಲ್ಲ.

13. ಧ್ಯಾನ ತರಬೇತಿ ಕಾರ್ಯಕ್ರಮಗಳಲ್ಲಿ ಹಣದ ವಿನಿಮಯವನ್ನು ತಿರಸ್ಕರಿಸಿ.

14. ಮೂರ್ತಿಪೂಜೆಯಲ್ಲಿ; ಜೀವಂತ ಮಾಸ್ಟರುಗಳ ಪೂಜೆಯಲ್ಲಿ ತೊಡಗದಿರಿ.

15. ಸ್ವಂತ ಧ್ಯಾನ ಶಕ್ತಿ ಬಳಸಿಕೊಂಡು ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು.

16. ಸಹಜವಾದ ಕೌಟುಂಬಿಕ ಜೀವನ ನಡೆಸಿ; ಸನ್ಯಾಸ ಅಥವಾ ವೈರಾಗ್ಯ ಬೇಡ.

17. ಎಲ್ಲಾ ನಗರ, ಪಟ್ಟಣ ಮತ್ತು ಹಳ್ಳಿಗಳಲ್ಲಿ ಪಿರಮಿಡ್ ಧ್ಯಾನ ಕೇಂದ್ರಗಳನ್ನು ಸ್ಥಾಪಿಸುವುದು.

18. ನಿಮ್ಮ ಧ್ಯಾನದ ಅನುಭವಗಳನ್ನು ಮತ್ತು ಆಧ್ಯಾತ್ಮಿಕ ಪರಿವರ್ತನೆಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿ.

## ಪತ್ರೀಜಿಯವರ ಬಗ್ಗೆ ಪಿರಮಿಡ್ ಮಾಸ್ಟರ್ಸ್ ಮಾತುಗಳಲ್ಲಿ...



ಜೀವನದಲ್ಲಿ ಹುಟ್ಟು-ಸಾವು, ಸುಖ-ದುಃಖಗಳ ಪರಿಸ್ಥಿತಿಗಳನ್ನು ಸಮನಾಗಿ ಸ್ವೀಕರಿಸಿ ಆರೋಗ್ಯ, ಆನಂದಮಯ ಜೀವನದದಾರಿಯನ್ನು (PSSM) ಪಿರಮಿಡ್ ಆಧ್ಯಾತ್ಮಿಕ ಸಂಸ್ಥೆಯ ಆಂದೋಲನದ ಮೂಲಕ ಎಲ್ಲರಿಗೂ ಪಿತಾಮಹ ಡಾ|| ಸುಭಾಷ್ ಪತ್ರೀಜಿಯವರಿಗೆ ಕೃತಜ್ಞತೆಗಳೊಂದಿಗೆ ನುಡಿ ನಮನಗಳನ್ನು ಅರ್ಪಿಸುತ್ತಿದ್ದೇನೆ.

**ಡಾ. ಗಿರಿಸ್ವಾಮಿ, ನೇತ್ರಶಸ್ತ್ರ ಚಿಕಿತ್ಸಾತಜ್ಞರು ಶಿವಮೊಗ್ಗ**


ಬ್ರಹ್ಮರ್ಷಿ ಪಿತಾಮಹ ಪತ್ರೀಜಿಯವರಿಗೆ ನನ್ನ ನುಡಿ ನಮನಗಳು, ಈ ಶತಮಾನ ಕಂಡ ಮಹಾನ್ ಚೇತನ. ಗುರು-ಶಿಷ್ಯ ಸಂಪ್ರದಾಯವನ್ನು ಕಿತ್ತೆಸೆದು ಪ್ರಾಣ ಸ್ನೇಹಿತನಂತೆ ಆತ್ಮಜ್ಞಾನವನ್ನು ಬೋಧಿಸಿದ ಪರಮಪೂಜ್ಯ ಯೋಗೀಶ್ವರ. ಇಂಥ ಅದಮ್ಯ ಚೇತನದ ಜೊತೆ ಜೊತೆಗೆ ನಾವು ಜೀವಿಸಿದೆವು ಎಂಬ ನೆನಪೇ ರೋಮಾಂಚನ. ಕರ್ಮ ಅಜ್ಞಾನದ ಕತ್ತಲೆಯಲ್ಲಿ ದಾರಿ ಕಾಣದೆ ಅಧೀರರಾದಾಗ ಕೈಹಿಡಿದು ನಡೆಸಲು ಬಂದ ಪುಣ್ಯ ಪ್ರಕಾಶ. ನನಗೆ ಸಮಸ್ಯೆಗಳು ಬಂದಾಗ ಸದಾ ದೇವರನ್ನು ದೂರುತ್ತಿದ್ದೆ, ನಿನ್ನ ವಾಸ್ತವಕ್ಕೆ ನೀನೇ ಕಾರಣ ಎಂಬ ಪತ್ರೀಜಿ ವಾಣಿಯಿಂದ ನನ್ನ ಜೀವನದ ದೃಷ್ಟಿಕೋನೇ ಬದಲಾಯ್ತು.



**ಲಲಿತಾ ನಾರಾಯಣ್, ಗಂಗಾವತಿ**

**ನಿದ್ರೆ, ಸಾವು, ಧ್ಯಾನ ಮೂರು ಉನ್ನತವಾದ ವಿಷಯಗಳು ಇವುಗಳ ಬಗ್ಗೆ ತಿಳಿಸುವುದೇ ಆಧ್ಯಾತ್ಮಿಕ ಶಾಸ್ತ್ರ.
ಈ ಮೂರು ವಿಷಯಗಳನ್ನು ತಿಳಿದವರು ಆಧ್ಯಾತ್ಮಿಕ ಜ್ಞಾನಿಗಳು. ಎಷ್ಟೋ ಜನ್ಮಗಳನ್ನು ಎತ್ತಿದ್ದೇವೆ. ಪ್ರತಿ ಜನ್ಮ ಕತ್ತಲು ಕಳೆದು ಬೆಳಕಾಗುವಂತಹುದೇ, ರಾತ್ರಿ ಮಲಗಿ ಬೆಳಗ್ಗೆ ಏಳುವಂತಹ ಸಾಧಾರಣ ವಿಷಯ.**

**~ ಬ್ರಹ್ಮರ್ಷಿ ಪಿತಾಮಹ ಪತ್ರೀಜಿ**





ಓಶೋ ಅವರು ದೇಹ ತ್ಯಜಿಸಿದ ನಂತರ, ನನಗೆ ಅನಾಥ ಪ್ರಜ್ಞೆ ಆವರಿಸಿತು. ನನಗೆ ಇನ್ನು ಮಾರ್ಗದರ್ಶನ ಮಾಡುವವರು ಯಾರು? ಓಶೋ ಒಬ್ಬರೇ ಅದಕ್ಕೆ ಸಮರ್ಥರಿದ್ದರು. ನಾನು ಜೀವನದಲ್ಲಿ ಮಹೋನ್ನತವಾದುದನ್ನು ಕಳೆದುಕೊಂಡೆ. ಇನ್ನು ಮುಂದೇನು ಎನ್ನುವ ಸ್ಥಿತಿಯಲ್ಲಿದ್ದೆ. ಅಂಥದರಲ್ಲಿ ಬ್ರಹ್ಮರ್ಷಿ ಪಿತಾಮಹ ಪತ್ರೀಜಿಯವರನ್ನು ಭೇಟಿಯಾದದ್ದು ಮಹಾದ್ಭುತ ಘಟನೆ. ಅವರು ಹಾಕಿಕೊಟ್ಟ ಮಾರ್ಗದಿಂದ ಜೀವನದ ದುಃಖ ಕಳೆಯಿತು. ಜ್ಞಾನೋದಯದ ಲಾಭ ದೊರೆಯಿತು. ಜೀವನಕ್ಕೆ ಒಂದು ಅರ್ಥ ದೊರೆತು ಜೀವನ ಪಾವನವಾಯಿತು. ಧನ್ಯೋಸ್ಮಿ... ಧನ್ಯೋಸ್ಮಿ... ಧನ್ಯೋಸ್ಮಿ.

**Dr. ಜೀವಂಧರ ಕೇತಪ್ಪನವರ, ಚಿಕ್ಕೋಡಿ**



ನಾನು ಪಿರಮಿಡ್ ವ್ಯಾಲಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ನಿರ್ವಾಹಕಿಯಾಗಿ ಹೋಗುತ್ತಿದ್ದಾಗ ಹೆಚ್ಚಾಗಿ ಮಾತನಾಡದಿದ್ದರೂ ಪತ್ರೀಜಿಯವರ ಉಪಸ್ಥಿತಿಯಲ್ಲೇ ತುಂಬಾ ಕಲಿತೆನು. ಅವರ ಜೊತೆ ಅವರ ಎನರ್ಜಿಯೊಂದಿಗೆ, ಅವರ ವರ್ತನೆಯಿಂದ, ಮಾತುಗಳ ಮೂಲಕ ಪ್ರತಿಯೊಂದೂ ಅವರಿಂದಲೇ ಕಲಿತೆನು. ಗುರು ಎಂದರೆ ಹೇಗಿರಬೇಕು ಎಂದು ತೋರಿಸಿದರು. ಈ ವಿಶ್ವಕ್ಕೆ ಸರಳ, ಅದ್ಭುತ ಧ್ಯಾನದ ಕೊಡುಗೆಯನ್ನು ಕೊಟ್ಟವರು ಪತ್ರೀಜಿಯವರು. ಇದಕ್ಕೂ ಮುಂಚೆ ನಾನು ಬೇರೆ ಬೇರೆ ಸಂಸ್ಥೆಗಳಿಗೆ ಹೋದಾಗ ಎಲ್ಲೂ ನನಗೆ ಇಷ್ಟು ತೃಪ್ತಿ ಸಿಕ್ಕಿರಲಿಲ್ಲ. ಧ್ಯಾನವಿಲ್ಲದಿದ್ದರೆ ಜೀವನ ಹೇಗಿರುತ್ತಿತ್ತೋ ಎನಿಸುತ್ತದೆ. ಈಗ ಅದ್ಭುತವಾದ ಜೀವನವನ್ನು ಆಸ್ವಾದಿಸುತ್ತಿದ್ದೇನೆ. ಇಷ್ಟು ಶ್ರೇಷ್ಠವಾದ ಧ್ಯಾನವನ್ನು ನೀಡಿದ ಪತ್ರಿಜೀಯವರಿಗೆ ಕೋಟಿ ಕೋಟಿ ವಂದನೆಗಳು.

**ರಜಿತಾ ಕೀರ್ತಿ, ಶಿಡ್ಲಘಟ**



ನನ್ನ ಗುರುಗಳಾದ ಬ್ರಹ್ಮರ್ಷಿ ಪತ್ರೀಜಿಯವರೊಂದಿಗಿನ ನನ್ನ ಒಡನಾಟವು ನನ್ನ ಜೀವನದ ಉದ್ದೇಶವನ್ನು ಪೂರ್ಣಗೊಳಿಸಿತು ಮತ್ತು ಇತರರಿಗೆ ಸಾಧ್ಯವಾದಷ್ಟು ಸೇವೆ ಮಾಡಲು ಸಹಾಯ ಮಾಡಿತು. ಪತ್ರೀಜಿಯವರು ಎಲ್ಲರೊಂದಿಗೆ ಸರಳತೆ ಹಾಗೂ ಸ್ನೇಹದಿಂದ ಇರುತ್ತಿದ್ದರು. ಶಿಷ್ಯತ್ವವನ್ನು ಎಂದಿಗೂ ಪ್ರೋತ್ಸಾಹಿಸಲಿಲ್ಲ ಮತ್ತು ಎಲ್ಲರನ್ನೂ ಗುರುಗಳಂತೆ ಬದುಕುವಂತೆ ಮಾಡಿದರು. ಇಂದು ಅವರ ದೈಹಿಕ ಅನುಪಸ್ಥಿತಿಯು ನಿಜವಾದ ಪಿರಮಿಡ್ ಮಾಸ್ಟರ್ ಮೇಲೆ ಪರಿಣಾಮ ಬೀರುವುದಿಲ್ಲ. ಏಕೆಂದರೆ, ಪ್ರತಿಯೊಬ್ಬ ಪಿರಮಿಡ್ ಮಾಸ್ಟರ್ ಸ್ವತಂತ್ರ ಮತ್ತು ಗುರಿ ಆಧಾರಿತ. ಜೀವನದ ಪ್ರತಿಯೊಂದು ವಿಷಯದಲ್ಲೂ ಅವರಂತೆ ಇರುವುದೇ ನನ್ನ ಜೀವನದ ದೊಡ್ಡ ಗುರಿ. ಪತ್ರೀಜಿ ಅವರನ್ನು ಒಂದೇ ಪದದಲ್ಲಿ ವಿವರಿಸಬೇಕೆಂದರೆ ಅವರು, "ಸತ್ಯದ ಸಾಕಾರ".

**ಅಯ್ಯಪ್ಪ, ಬೆಂಗಳೂರು**



ಬ್ರಹ್ಮರ್ಷಿ ಪಿತಾಮಹ ಡಾ|| ಸುಭಾಷ್ ಪತ್ರೀಜಿಯವರು ಮಹಾ ಚೈತನ್ಯ ಪುರುಷರು, ಕಂಡೂ ಕೇಳರಿಯದ ಮಹಾಗುರುಗಳು. ವಿನಯತೆ, ಸರಳತೆ, ಸಜ್ಜನತೆ, ಮಾನವೀಯತೆಯ ಸತ್ಪುರುಷರು. "ಅಪ್ಪೋ ದೀಪೋ ಭವ" ನೀವೇ ನಿಮ್ಮ ದಿವ್ಯ ಜ್ಯೋತಿಯನ್ನು ಬೆಳಗಿಸಿ ಎಂದು ತಿಳಿಸಿದ ಮಹಾ ದೈವಾಂಶರು. ಎಲ್ಲರಲ್ಲೂ ದೇವರನ್ನು ಕಂಡ ಮಹಾನ್ ಚೈತನ್ಯ ಅವರಿಗೆ ನನ್ನ ಶತಕೋಟಿ ಆತ್ಮ ವಂದನೆಗಳು.

**ಜ್ಯೋತಿ. ಬಿ, ಬೆಂಗಳೂರು**



ನಿಮ್ಮ ವಾಸ್ತವಕ್ಕೆ ನೀವೇ ಕಾರಣರು. ಬೇರೆ ಯಾರೂ ಅಲ್ಲ, ಎಂಬ ಸತ್ಯವನ್ನು ನಮ್ಮ ಜೀವನದಲ್ಲಿ ತಿಳಿಯುವಂತೆ ಮಾಡಿದವರು. ಋಷಿ ಮುನಿಗಳಿಗೆ ಸೀಮಿತವಾಗಿದ್ದ ಧ್ಯಾನವನ್ನು ಸರಳೀಕರಿಸಿ `ಆನಾಪಾನಾಸತಿ' ಎಂಬ ಸರಿಯಾದ ಧ್ಯಾನ ಪದ್ಧತಿಯನ್ನು ಲೋಕಕ್ಕೆ ತಿಳಿಸಿದರು. ಹಿಂಸೆಯನ್ನು ಬಿಟ್ಟು ಅಹಿಂಸೆಯನ್ನು, ಶಾಕಾಹಾರ ಜಗತ್ತು ನಿರ್ಮಾಣ ಮಾಡಲು ಸಂಕಲ್ಪಿಸಿ, ಪ್ರೋತ್ಸಾಹ ಮಾಡುತ್ತಿರುವ ಕರುಣಾಮಯಿ. ನಮಗೆ ತಿಳಿಯದಂತೆಯೇ ನಮ್ಮನ್ನು ಲೋಕಕಲ್ಯಾಣ ಕಾರ್ಯಗಳಲ್ಲಿ ತೊಡಗಿಸಿರುವ ನಮ್ಮ ಮಹಾನ್ ಗುರು, ಶಕ್ತಿ, ಚೇತನ ದೇವತಾಸ್ವರೂಪಿಗೆ ಅನಂತ ಅನಂತ ನಮನಗಳು.

**ವಿರುಪಾಕ್ಷಪ್ಪ, ಬೆಂಗಳೂರು**



ಈ ಜೀವನವೇನು ಎಂದು ಅರ್ಥವಾಗದೇ ಇದ್ದಾಗ ಪತ್ರೀಜಿಯವರು ಹೇಳಿರುವಂತಹ ಸರಳವಾದ ಧ್ಯಾನ ಮತ್ತು ಆತ್ಮವಿಜ್ಞಾನದಿಂದ ಜೀವನವು ತುಂಬಾ ಸರಳವಾಯಿತು. ಎಲ್ಲಾ ಭಯಗಳಿಂದ, ಅಜ್ಞಾನದಿಂದ ಹೊರಬಂದು ದಿವ್ಯಜೀವನವನ್ನು ನಡೆಸುತ್ತಾ, ನನ್ನ ಜೀವನದ ಗುರಿಯನ್ನು ಕಂಡುಕೊಂಡು ಈ ಜನ್ಮವನ್ನು ಕೊನೆಯ ಜನ್ಮವನ್ನಾಗಿ ಮಾಡಿಕೊಳ್ಳುವುಕ್ಕೆ ದಾರಿ ತೋರಿಸಿದ ಮಹಾನ್ ಚೇತನ ಪತ್ರೀಜಿ. ಪ್ರತಿಯೊಂದು ವಿಷಯದಲ್ಲೂ ಅವರು ನನಗೆ ಮಾದರಿಯಾಗಿದ್ದರು. ಸತ್ಯಕ್ಕೆ, ವಿನಯಕ್ಕೆ, ಸರಳತೆಗೆ, ಪರಿಶುದ್ಧತೆಗೆ ಪ್ರತಿರೂಪವೇ ಪತ್ರೀಜಿ ! ಅವರಂತೆ ಆಗುವುದಕ್ಕೆ ಪ್ರತಿಕ್ಷಣ ಪ್ರಯತ್ನವನ್ನು ಮುನ್ನಡೆಸುತ್ತಿದ್ದೇನೆ. ಅವರ ಗುರಿಯೇ ನನ್ನ ಗುರಿ ಆಗಿದೆ. ಅವರಿಗೆ ಆನಂತಕೋಟಿ ವಂದನೆಗಳು.

**ಅನಿತ, ಬೆಂಗಳೂರು**



ಪ್ರತಿಯೊಬ್ಬರ ಜೀವನದಲ್ಲಿಯು ಗುರುವಿನ ಪಾತ್ರ ಬಹಳ ಮಹತ್ವಪೂರ್ಣವಾದುದು. ಪ್ರತಿಯೊಬ್ಬರಿಗು ಗುರುಗಳು ಅತ್ಯಗತ್ಯ. ಪತ್ರೀಜಿಯವರಿಂದ ನನ್ನ ಜೀವನ ಧ್ಯಾನಮಯವಾಯಿತು, ಅರ್ಥಪೂರ್ಣವಾಯಿತು. ಅವರ ಋಣವನ್ನು ತೀರಿಸಲು ಸಾಧ್ಯವಿಲ್ಲ. ಅವರ ಗುರಿಯೇ ನನ್ನ ಗುರಿ. ಗುರುಗಳ ಮಾತನ್ನು ಮಾತ್ರ ವಿಶ್ವಸಿಸಬೇಕು. ಗುರುಗಳೇ ನಮ್ಮ ಗುರಿಯತ್ತ ನಮ್ಮನ್ನು ಸೇರಿಸುತ್ತಾರೆ.

**ಗೌತಮಿ, ಬೆಂಗಳೂರು**

**ಉದ್ಧರೇದಾತ್ಮನಾತ್ಮಾನಾಂ – ಪ್ರತಿಯೊಬ್ಬರೂ ಅವರನ್ನು ಅವರೇ ಉದ್ಧರಿಸಿಕೊಳ್ಳಬೇಕು !**
**~ ಭಗವದ್ಗೀತೆ**





ಪತ್ರೀಜಿಯವರ ಕೊಳಲಿನ ನಾದದಲ್ಲಿ ನಾನು ಶ್ರೀ ಕೃಷ್ಣನ ಸನ್ನಿಧಿಯಲ್ಲಿರುವ ಅನುಭವವಾಯಿತು. ಅಂತಹ ಮಹಾ ಪುರುಷರಿರುವ ಯುಗದಲ್ಲಿ ನಾನು ಇರುವುದು ತುಂಬಾ ಹೆಮ್ಮೆಯೆನಿಸಿತು. ಅವರ ದಿವ್ಯ ಚೈತನ್ಯದೊಂದಿಗೆ ಜೀವನವನ್ನು ಸಾಗಿಸಿದ ನಾವೇ ಪುಣ್ಯವಂತರು.

**ಶ್ರೀಪಾದವಲ್ಲಿ, ಢಿಲ್ಲೀ**



ನಾನು PSSMಗೆ ಬಂದನಂತರ ನನ್ನ ಜೀವನದಲ್ಲಿ ಬಹಳಷ್ಟು ಪರಿವರ್ತನೆ ಆಯಿತು. ನನ್ನ ಪರಿವರ್ತನೆ ಆದ ಮೇಲೆ ಇನ್ನೂ ಅನೇಕರ ಜೀವನದಲ್ಲಿ ಸಕಾರಾತ್ಮಕ ಪರಿವರ್ತನೆಯನ್ನು ಮತ್ತು ಶಾಶ್ವತ ಆನಂದವನ್ನು ತರುವುದಕ್ಕೆ ನನಗೆ ಶಕ್ತಿ ಬಂತು. ಪತ್ರೀಜಿಯವರು ಹೇಳಿರುವ ಆನಾಪಾನಾಸತಿ ಧ್ಯಾನ ಮತ್ತು ಅವರು ಹೇಳಿರುವಂತಹ ಪುಸ್ತಕಗಳು ಬಹುಶಃ ನಾನು PSSMಗೆ ಸೇರದಿದ್ದರೆ ನನಗೆ ಸಿಕ್ಕಿರಲಿಲ್ಲ. ಇದರಿಂದ ನನ್ನ ಜೀವನಶೈಲಿ, ಆಲೋಚನಾಶೈಲಿ ಬದಲಾಯಿತು.

**ಶೈಲಜ, ಚಿಂತಾಮಣಿ**



ಪತ್ರೀಜಿಯವರು ಆಧ್ಯಾತ್ಮಿಕ ವಿಚಾರಗಳನ್ನು ಸರಳವಾದ ರೀತಿಯಲ್ಲಿ ಪ್ರತಿಯೊಬ್ಬರಿಗೂ ಅರ್ಥವಾಗುವ ರೀತಿಯಲ್ಲಿ ಹೇಳುತ್ತಾರೆ. ಅವರು ನನಗೆ ಗುರು, ಮಾರ್ಗದರ್ಶಕರು ಕೂಡಾ.. ಅವರ ಅತಿಥಿಸತ್ಕಾರದ ರೀತಿ ನನಗೆ ತುಂಬಾ ಇಷ್ಟ. ಅವರಿಂದ ಕಲಿತದ್ದು ಸೇವೆ ಸೇವೆ ಸೇವೆ !!!

**ಶ್ರೀನಿಜ, ಬೆಂಗಳೂರು**



ತಂದೆ ಮತ್ತು ಗುರುವಿನ ಸ್ಥಾನದಲ್ಲಿರುವ ಪತ್ರೀಜಿಯವರು ನಮ್ಮ ಜೀವನದಲ್ಲಿ ಧ್ಯಾನ, ಸ್ವಾಧ್ಯಾಯ, ಸಜ್ಜನ ಸಾಂಗತ್ಯದ ನಿಜವಾದ ಅರ್ಥವನ್ನು ತಿಳಿಸಿದವರು. ಧ್ಯಾನದಿಂದ ಜೀವನದಲ್ಲಿ ಅನುಭವದ ಪಾಠಗಳನ್ನು ಆಸ್ವಾಧಿಸಲು ಕಲಿಸಿದ ಮಹಾನ್ ಚೇತನರಿಗೆ ನನ್ನ ಧ್ಯಾನ ನಮನಗಳು.

**ಸುನೀತ, ಬೆಂಗಳೂರು**



ಅಜ್ಞಾನಿಯಾಗಿದ್ದ ನನಗೆ ಆಧ್ಯಾತ್ಮಿಕ ಜ್ಞಾನವನ್ನು ಬೋಧಿಸಿದವರು ನನ್ನ ಗುರು ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ. ಎಷ್ಟು ಹೇಳಿದರು ಅವರ ಋಣವನ್ನು ತೀರಿಸಲು ಸಾಧ್ಯವಿಲ್ಲ. ಅವರಿಗೆ ನನ್ನ ಶತಕೋಟಿ ಆತ್ಮ ಪ್ರಣಾಮಗಳು.

**ಉಮಾಲೋಕೇಶ್, ಚಿಕ್ಕಬಳ್ಳಾಪುರ**



ನನ್ನ ಜೀವನದಲ್ಲಿ ನಾನು ಪತ್ರೀಜಿಯವರಂತಹ ಮಹಾನ್ ಗುರುಗಳನ್ನು ಎಂದಿಗೂ ಭೇಟಿ ಮಾಡಿಲ್ಲ. ವಿವಿಧ ಪುಸ್ತಕಗಳು, ಗುರುಗಳಿಂದ ಅವರು ನಮಗೆ ನೀಡುವ ಅವರ ಸಂದೇಶಗಳನ್ನು ನಾನು ಪ್ರೀತಿಸುತ್ತೇನೆ ಮತ್ತು ಗೌರವಿಸುತ್ತೇನೆ. ನಾನು ಅವರನ್ನು ಅನುಸರಿಸುತ್ತೇನೆ ಮತ್ತು ಅವರ ಮಾತುಗಳನ್ನು ಪಾಲಿಸುತ್ತೇನೆ. ಹಾಗಾಗಿ ನನಗೆ ಆತ್ಮತೃಪ್ತಿ ಸಿಕ್ಕಿತು. ಅವರಿಗೆ ನನ್ನ ಪ್ರಣಾಮಗಳು.

**ದೀಕ್ಷಿತ, USA**



ಪತ್ರೀಜಿಯವರು ನೀಡಿರುವ ಧ್ಯಾನ, ಜ್ಞಾನದಿಂದ ಸಂತೋಷದ ಜೀವನವನ್ನು ನಡೆಸುತ್ತಿದ್ದೇನೆ. ಅವರು ಪಿರಮಿಡ್ ಶಕ್ತಿಯ ಬಗ್ಗೆ ಇಡೀ ಪ್ರಪಂಚಕ್ಕೆ ತಿಳಿಸಿದರು. ಧ್ಯಾನದಿಂದ ನನ್ನ ಬೆಲೆ ನನಗೆ ಗೊತ್ತಾಯಿತು. ಅವರಿಗೆ ನನ್ನ ಧನ್ಯವಾದಗಳು.

**ಕುಸುಮಾ ಬಾಲಾಜಿ, ಚಿಕ್ಕಬಳ್ಳಾಪುರ**



ಪತ್ರೀಜಿಯವರು ಹೇಳಿರುವ ಧ್ಯಾನ ಜ್ಞಾನದಿಂದ, no expectation, no complaints, no judgement ಎನ್ನುವ ಮಾತುಗಳನ್ನು ಆಚರಿಸುತ್ತಾ, ಭೌತಿಕ ಮತ್ತು ಆಧ್ಯಾತ್ಮಿಕ ಜೀವನದಲ್ಲಿ ಅದ್ಭುತವಾಗಿ ಜೀವಿಸುತ್ತಿದ್ದೇನೆ. ಎಲ್ಲಾ ಗುರುಗಳು ಶಿಷ್ಯರನ್ನು ತಯಾರಿಸುತ್ತಾರೆ ಆದರೆ, ಇವರು ಎಲ್ಲರನ್ನೂ ಗುರುಗಳನ್ನಾಗಿ ತಯಾರು ಮಾಡಿದ್ದಾರೆ. ಇವರಿಗೆ ನನ್ನ ಶಿರಸಾಷ್ಟಾಂಗ ನಮಸ್ಕಾರಗಳು.

**ಸೀತಾ ಮಹಾಲಕ್ಷ್ಮಿ, ಕಾಕಿನಾಡ**




"ಪತ್ರೀಜಿಯವರಿಂದ ಧ್ಯಾನ ಒಂದೇ ಅಲ್ಲದೇ, ಜೀವನದ ಕಲೆಯನ್ನು ಕೂಡಾ ಕಲಿತಿದ್ದೇನೆ. ಪತ್ರೀಸರ್ ಅವರಿಗೆ ನಾನು ಚಿರಋಣಿ".

**ರೇಷ್ಮ, ಬೆಂಗಳೂರು**

**ಅಪ್ಪೋ ದೀಪೋ ಭವ – ನಿಮ್ಮ ದೀಪವನ್ನು ನೀವೇ ಬೆಳಗಿಸಿಕೊಳ್ಳಿ.**
**~ ಬುದ್ಧ**





ಸರಳ ಸುಂದರ ಧ್ಯಾನದ ಮುಖಾಂತರ ಎಲ್ಲರ ಜೀವನ ಬೆಳಗುವಂತೆ ಮಾಡಿ ಎಲ್ಲರೂ ಆತ್ಮೋನ್ನತಿ ಹಾದಿಯಲ್ಲಿ ನಡೆಯುವಂತೆ ಮಾಡಿದ ಮಹಾನ್ ಗುರುಗಳು "ಸುಭಾಷ್ ಪತ್ರೀಜೀ". ಗುರುಗಳಿಗೇ ಮಹಾನ್ ಗುರುಗಳು. ಯಾವ ಮಾತಿನಲ್ಲಿಯೂ ಬಣ್ಣಿಸಲಾರದಂತಹ ಮಹಾತ್ಮ. ದೈವತ್ವದ ಕಡೆ ದಾರಿ ತೋರಿದ ಮಹಾನ್ ಪುರುಷ. ಧ್ಯಾನದ ಹಾದಿಯನ್ನು ಅದ್ಭುತವಾಗಿ ಎಲ್ಲರಿಗೂ ತಿಳಿಸಿ ಮುನ್ನಡೆಸಿದ ಮಹಾತ್ಮ ನಿಗೆ ಆತ್ಮ ಪ್ರಣಾಮಗಳು.

**ಅರ್ಚನ, ಚಿಕ್ಕಬಳ್ಳಾಪುರ**



ಏನೆಂದು ಹೇಳಲಿ ಅಂತಹ ಮಹಾನ್ ಜ್ಞಾನ ಪರ್ವತದ ಬಗ್ಗೆ? ಏನೆಂದು ವರ್ಣಿಸಲಿಅಂತಹ ಸೇವಾ ಸಾಮ್ರಾಟ್‌ನ ಬಗ್ಗೆ? ಏನೆಂದು ಬಣ್ಣಿಸಲಿ ಪ್ರಾಣಿ ಪಕ್ಷಿಗಳನ್ನು ಉಳಿಸಿದ ಅಂತಹ ಕರುಣಾ ಮೂರ್ತಿಯ ಬಗ್ಗೆ? ನನ್ನಲ್ಲಿ ಏನೂ ಪದಗಳಿಲ್ಲ. ಆದರೆ, ಒಂದು ಮಾತ್ರ ಖಚಿತವಾಗಿ ಹೇಳಬಲ್ಲೆ: ನಮ್ಮೆಲ್ಲರ ಅಸ್ತಿತ್ವದಲ್ಲಿ ನಮ್ಮ ಧ್ಯಾನ ಗುರುವಾದ ಪತ್ರೀಜಿಯವರನ್ನು ಎಂದೆಂದಿಗೂ ಶಾಶ್ವತವಾಗಿ ಅರಿಯಬಹುದು. ನಾನು ಈ ದಿನ ಶಾಲಾ, ಕಾಲೇಜು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಧ್ಯಾನ ಹೇಳಿಕೊಡುವ ಸೌಭಾಗ್ಯ ದೊರೆತದ್ದು ನನ್ನ ಪ್ರೀತಿಯ ಗುರುವಾದ ಪತ್ರೀಜಿರವರಿಂದ. ಈ ಆತ್ಮ ಇರುವವರೆಗೂ ಪತ್ರೀಜಿಯವರಿಗೆ ನಾನು ಚಿರ ಋಣಿ.

**ದಿವ್ಯಶ್ರೀ, ಬೆಂಗಳೂರು**



'ಧ್ಯಾನ', 'ನಮ್ಮ ಶ್ವಾಸವೇ ನಮ್ಮ ಗುರು', 'ಸಸ್ಯಾಹಾರ', 'ಸ್ವಾಧ್ಯಾಯ', 'ನಮ್ಮ ಜೀವನದ ಸೃಷ್ಟಿಕರ್ತರು ನಾವೇ' ಎಂಬೆಲ್ಲಾ ಮಾತುಗಳು ಕೇಳಿದಾಗ ನೆನಪಾಗುವುದು ನೂತನ ಆಧ್ಯಾತ್ಮಿಕ ವಿಷಯಗಳನ್ನು ಜನ ಸಾಮಾನ್ಯರಿಗೆ ತಲುಪಿಸುವ ಯತ್ನ ಮಾಡಿದ ನಮ್ಮ ಪತ್ರಿ ಮಹಾರಾಜ್. ಇವೆಲ್ಲವನ್ನೂ ಕೇವಲ ನೆನೆಸಿಕೊಂಡರೆ ಸಾಲುವುದಿಲ್ಲ. ಅದನ್ನು ನಮ್ಮ ಜೀವನದಲ್ಲಿ ಪಾಲಿಸಿ ಗುರುವಿನ ದಾರಿಯನ್ನು ಹಿಂಬಾಲಸಿದರೆ ಅದೇ ಜೀವನದ ನಿಜವಾದ ಸಾರ್ಥಕತೆ.

**ಸಹನ, ಕೊಳ್ಳೇಗಾಲ**

ದೈವಂ ಮನುಷ್ಯ ರೂಪೇಣ' ಎನ್ನುವದಕ್ಕೆ ಪತ್ರೀಜಿಯವರೇ ಸಾಕ್ಷಾತ್ ನಿದರ್ಶನ. ನಮ್ಮ ಜೀವನದ ಗುರಿಯನ್ನು ನಮಗೆ ಆನಾಪಾನಸತಿ ಧ್ಯಾನದ ಮೂಲಕ ತಿಳಿಸಿಕೊಟ್ಟು, ನಮೆಲ್ಲರ ಜೀವನದಲ್ಲಿ ಬೆಳಕನ್ನು ತುಂಬಿದ ದೈವೀ ಸ್ವರೂಪ 'ಪತ್ರೀಜಿ'.ತಂದೆ, ತಾಯಿ, ಗುರು ಸಕಲವೂ ಅವರೇ. ಅವರ ಗುರಿ 'ಧ್ಯಾನ ಜಗತ್', 'ಶಾಕಾಹಾರ ಜಗತ್', 'ಪಿರಮಿಡ್ ಜಗತ್' ಅನ್ನು ನಾವೆಲ್ಲರೂ ಕೂಡಿ ನೆರವೇರಿಸೋಣ. 'ವಿಶ್ವ ಗುರು' ಬ್ರಹ್ಮರ್ಷಿ ಪಿತಾಮಹ ಪತ್ರೀಜಿಯವರಿಗೆ ನನ್ನ ಶತಕೋಟಿ ಆತ್ಮ ಪ್ರಣಾಮಗಳು. 'ಜೈ ಪತ್ರೀಜಿ' . ~ **ಶೃತಿ, ಬೆಂಗಳೂರು**

## ಪತ್ರೀಜಿ - ನಿಮಗೆ ಹೃತ್ಪೂರ್ವಕ ಧನ್ಯವಾದಗಳು !!



ಪಿರಮಿಡ್ ಕಾಲ್ ಸರ್ವೀಸಸ್ ಇದು ಬ್ರಹ್ಮರ್ಷಿ ಪಿತಾಮಹ ಪತ್ರೀಜಿಯವರ ಕನಸು, ಲಾಕ್ ಡೌನ್ ಸಂದರ್ಭದಲ್ಲಿ ಲಕ್ಷಾಂತರ ಜನ ಮನೆಯಲ್ಲಿಯೇ ಕುಳಿತು ಆಧ್ಯಾತ್ಮಿಕ ಜ್ಞಾನವನ್ನು ಪಡೆಯಲು ರಾಜಮಾರ್ಗವಾಯಿತು. ಇಂಥ ಅಮೋಘ ವೇದಿಕೆಯಲ್ಲಿ ಕೆಲಸ ಮಾಡುತ್ತಿರುವುದು ನಮ್ಮ ಸುಕೃತ. ಬ್ರಹ್ಮರ್ಷಿ ಪಿತಾಮಹ ಡಾ ಸುಭಾಷ್ ಪತ್ರೀಜಿರವರಿಗೆ ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು (PCSB) ತಂಡದ ವತಿಯಿಂದ, ಪ್ರತಿ ಪಿರಮಿಡ್ ಮಾಸ್ಟರ್ ಗಳ ವತಿಯಿಂದ, ಹೊಸದಾಗಿ ಬಂದಿರುವಂತಹ ಧ್ಯಾನಿಗಳ ವತಿಯಿಂದ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸುತ್ತಿದ್ದೇವೆ. ನಾವೆಲ್ಲರೂ ಸೇರಿ ಒಗ್ಗಟ್ಟಾಗಿ ಸಾಮೂಹಿಕ ಚೈತನ್ಯದಿಂದ ನಿಮ್ಮ ಲಕ್ಷದ ಕಡೆ ಕೆಲಸ ಮಾಡುತ್ತೇವೆ. ಧ್ಯಾನ, ಶಾಕಾಹಾರ ಮತ್ತು ಪಿರಮಿಡ್ ಶಕ್ತಿಯ ಬಗ್ಗೆ ಪ್ರತಿಯೊಬ್ಬರಿಗೂ ತಿಳಿಸುತ್ತೇವೆ.


## ಪತ್ರೀಜಿಯವರೊಂದಿಗೆ PCSBಯ ಮೊದಲನೆಯ ವಾರ್ಷಿಕೋತ್ಸವದ ಸವಿನೆನಪು



**ಜಯಹೋ ಪತ್ರೀಜಿ**



**ಜಯಹೋ PSSM**



**ಜಯಹೋ PCSB**

# PCSB ಚಾನಲ್ ವಿಶ್ಲೇಷಣೆ


**PCSB ಯೂಟ್ಯೂಬ್ ಚಾನಲ್‌ಗೆ ಚಂದಾರಿಕೆಯಲ್ಲಿ 12,000 ಸಂಖ್ಯೆಯನ್ನು ದಾಟಿರುವ ಎಲ್ಲಾ ಸಹೃದಯರಿಗೆ ನಮ್ಮ ಹೃದಯಪೂರ್ವಕ ಧನ್ಯವಾದಗಳು**

**Subscribers**




**12,400**

**Views**




**2,018,489**


**Uploads**



**3,330**




| Geography | Views | | Average view duration | Watch time (hours) | |
|---|---|---|---|---|---|
| Total | 2,018,489 | | 11:28 | 385,851.4 | |
| India | 1,953,570 | 96.8% | 11:29 | 374,384.6 | 97.0% |
| United States | 2,613 | 0.1% | 13:16 | 578.4 | 0.2% |
| Canada | 460 | 0.0% | 3:21 | 25.7 | 0.0% |
| Australia | 293 | 0.0% | 15:06 | 73.8 | 0.0% |
| United Kingdom | 258 | 0.0% | 15:50 | 68.1 | 0.0% |
| Japan | 145 | 0.0% | 0:26 | 1.1 | 0.0% |
| United Arab Emirates | 74 | 0.0% | 4:21 | 5.4 | 0.0% |
| Turkey | 49 | 0.0% | 0:57 | 0.8 | 0.0% |
| Singapore | 42 | 0.0% | 7:39 | 5.4 | 0.0% |
| Iraq | 37 | 0.0% | 0:29 | 0.3 | 0.0% |
| Saudi Arabia | 31 | 0.0% | 1:16 | 0.7 | 0.0% |
| Indonesia | 29 | 0.0% | 0:39 | 0.3 | 0.0% |
| Malaysia | 24 | 0.0% | 2:36 | 1.0 | 0.0% |
| Pakistan | 23 | 0.0% | 0:23 | 0.2 | 0.0% |




| Viewer gender | Views | Average view duration | Average percentage viewed | Watch time (hours) |
|---|---|---|---|---|
| Female | 58.2% | 11:56 | 12.7% | 60.5% |
| Male | 41.8% | 10:51 | 11.8% | 39.5% |
| User-specified | 0% | 5:21 | 4.9% | 0% |

# ನೇರ ಪ್ರಸಾರ ಕಾರ್ಯಕ್ರಮಗಳು

**ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು (PCSB)** ಒಂದು **ಲಾಭರಹಿತ ಸೇವಾ ಸಂಸ್ಥೆ** ಆಗಿರುತ್ತದೆ. ಧ್ಯಾನ ಪ್ರಚಾರವೇ ಇದರ ಮುಖ್ಯ ಉದ್ದೇಶವಾಗಿದೆ. ಜನರು ಮನೆಯಲ್ಲಿದ್ದುಕೊಂಡು, ಮೊಬೈಲ್ ಮೂಲಕ ಉಚಿತವಾಗಿ ಧ್ಯಾನ ಶಿಕ್ಷಣವನ್ನು ಪಡೆಯಬಹುದು. ಪ್ರತಿದಿನ 'ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು' Zoom ಮತ್ತು Youtube ಮೂಲಕ ಹಲವಾರು ವೈವಿಧ್ಯಮಯ ಕಾರ್ಯಕ್ರಮಗಳು ನಡೆಯುತ್ತಿವೆ.

**ಪ್ರತಿದಿನ ಬೆಳಗ್ಗೆ 3.00 – 6.30 ಗಂಟೆಯ ವರೆಗೆ ಮಾರ್ಗದರ್ಶನ ಸಂಗೀತನಾದ ಧ್ಯಾನ**
**ಪ್ರತಿದಿನ ಮಧ್ಯಾಹ್ನ 3.00 – 4.30 ಗಂಟೆಯ ವರೆಗೆ ಸತ್ಸಂಗ ಮತ್ತು ಧ್ಯಾನ ಕಾರ್ಯಕ್ರಮ**
**ಸೋಮವಾರ-ಶುಕ್ರವಾರ ರಾತ್ರಿ 7.15 – 8.00 ಗಂಟೆಯ ವರೆಗೆ ಮಕ್ಕಳಿಗೆ ಧ್ಯಾನ ಕಾರ್ಯಕ್ರಮ**
**ಪ್ರತಿ ಭಾನುವಾರ ಸಂಜೆ 6.00 – 6.30ರ ವರೆಗೆ ಮಕ್ಕಳಿಗೆ ಭಗವದ್ಗೀತೆಯ ಕಾರ್ಯಕ್ರಮ**
**ಪ್ರತಿದಿನ ರಾತ್ರಿ 9.30 – 10.30 ಗಂಟೆಯ ವರೆಗೆ ಮಾರ್ಗದರ್ಶನ ಸಂಗೀತನಾದ ಧ್ಯಾನ**

ಸ್ಕೂಲ್, ಕಾಲೇಜು, ಆಫೀಸು ಮತ್ತು ಎಲ್ಲಿಯಾದರೂ ಯಾರಿಗಾದರೂ ಧ್ಯಾನ ಹೇಳಿಕೊಡಬೇಕಾದರೆ ಈ ಕೆಳಗೆ ಇರುವ ಪಿರಮಿಡ್ ಕಾಲ್ ಸರ್ವೀಸಸ್ ನಂಬರ್‌ಗೆ ಸಂಪರ್ಕಿಸಿ.

**YouTube Link:**
**PyramidCallServicesBengaluru**

**Join ZOOM Meeting:**
**Meeting ID: 982 166 3558 | Password: 297628**

**ಯಾವುದೇ ಪಿರಮಿಡ್‌ಗಳಿಗೆ | ಶಿಫಾರಸು ಮಾಡಿದ ಪುಸ್ತಕಗಳು | ಮ್ಯಾಗಜೈನ್ಸ್ ಗೆ ಸಂಪರ್ಕಿಸಿ - +91 63608 13235, www.51pyramids.in**

**ಈ ವಾರ್ತಾಪತ್ರವನ್ನು ಪಿರಮಿಡ್ ವರ್ಲ್ಡ್ ಫೌಂಡೇಶನ್‌ನಿಂದ ಪ್ರಕಟಿಸಲಾಗಿದೆ ಮತ್ತು ಮುದ್ರಿಸಲಾಗಿದೆ - ಸಂಪರ್ಕಿಸಿ +91 8050925330;**
**PCSB ಅನ್ನು ಬೆಂಬಲಿಸಲು ದೇಣಿಗೆ ನೀಡಿ Gpay/ PhonePay / PayTm - 9902761761**

**ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು**
ಧ್ಯಾನ ಕಲಿಕೆಗಾಗಿ ಈಗಲೇ ಕರೆಮಾಡಿ
**+91 99029 19058, +91 87224 97146, +91 97423 02833**
ದೂರವಾಣಿ ಮೂಲಕ ಉಚಿತ ಧ್ಯಾನ ಬೋಧನೆಗಾಗಿಯೇ ಮೀಸಲಾಗಿರುವ ತಂಡ
www.pssmovement.org